ಇವುಗಳನ್ನು ಯಾವ ರೀತಿಯಲ್ಲಿ ರಿವೈವಲ್ ಮಾಡಬೇಕೋ ಆ ರೀತಿಯಲ್ಲಿ ಕ್ರಮ ತೆಗೆದುಕೊಳ್ಳತಕ್ಕಂತಹ ಅವಶ್ಯಕತೆ ಇದೆ ಎಂದು ನಾನು ಈಗಾಗಲೇ ತಮಗೆ ಹೇಳಿದ್ದೇನೆ ಆ ರೀತಿಯಲ್ಲಿ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೇ ಇದು ಪ್ರಮುಖವಾದ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ಇಲ್ಲ. ಮುಖ್ಯಮಂತ್ರಿಗಳು ಬಂದಾಗ ಇದನ್ನು ತೆಗೆದುಕೊಳ್ಳತಕ್ಕಂಥಾದ್ದು ಸೂಕ್ತ ವೆಂದು ನನಗನಿಸುತ್ತದೆ.

ಅಧ್ಯಕ್ಷರು:– ಹೇಗಾಗುತ್ತದೆಯೋ ನೋಡೋಣ. ಈಗ ನಿಯಮ 334 ಅನ್ನು ತೆಗೆದುಕೊಳ್ಳೋಣ.

ಶ್ರೀ ಸಿ ಬೈರೇಗೌಡ:– ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಬಂದರು ಈಗ ತೆಗೆದುಕೊಳ್ಳುವುದು ಸೂಕ್ತ ವೆಂದು ನನಗೆ ಅನಿಸುತ್ತದೆ. ಗಮನ ಸೆಳೆಯುತ್ತೇನೆ.

ಅಧ್ಯಕ್ಷರು:– ಬೇಡ, ನಾನು ಒಂದು ಗಮನ ಸೆಳೆದು ಆಮೇಲೆ ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:– ಈ ತರಹದ ನೇಚರ್ ಇರುವ ಸಬ್ಜಕ್ಟ್ ಮುಂದಕ್ಕೆ ಹೋಗುತ್ತಿರುತ್ತದೆ.

ಅಧ್ಯಕ್ಷರು:– ಇದಕ್ಕೆ ಸಾಕಷ್ಟು ಪ್ರಿಯಾರಿಟಿ ಕೊಟ್ಟು ಅದನ್ನು ಸೇರಿಸಿದ್ದೇನೆ. ಆದ್ದರಿಂದ ಮುಂದಕ್ಕೆ ಹೋಗುವ ಪ್ರಶ್ನೆ ಇಲ್ಲ. ಈ ಸದನದ ಸಭಾನಾಯಕರಾದ ಶ್ರೀ ಎಂ. ವೀರಪ್ಪಮೊಯಿಲಿಯವರ 54ನೇ ಜನ್ಮದಿನ. ಈ ಸದನದ ಎಲ್ಲಾ ಸದಸ್ಯರ ಪರವಾಗಿ ಹಾಗೂ ನನ್ನ ಪರವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಹೃತ್ಪೂರ್ವಕವಾದ ಶುಭಾಶಯಗಳನ್ನು ಕೋರುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಅವರಿಂದ ನಮಗೇನೂ ಇಲ್ಲವಲ್ಲ.

ಅಧ್ಯಕ್ಷರು:– ಅವರಿಂದ ನಿಮಗೆ ಧನ್ಯವಾದಗಳು ಸಿಗುತ್ತದೆ ಅಷ್ಟೇ.

3) ಸಾರಾಯಿಯನ್ನು ಪ್ಲಾಸ್ಟಿಕ್ ಚೀಲದಲ್ಲಿ ಮಾರುವುದರಿಂದ ಅಬಕಾರಿ ಆದಾಯದಲ್ಲಿ ಸೋರಿಕೆ.

ಶ್ರೀ ಸಿ. ಬೈರೇಗೌಡ:– ಸಾರಾಯಿ ಮಾರಾಟದಿಂದ ಆಗುತ್ತಿರತಕ್ಕಂಥ ಸೋರಿಕೆ, ರಾಜ್ಯಕ್ಕೆ ಬರಬೇಕಾಗಿರತಕ್ಕಂತ ಹಣದ ಸೋರಿಕೆ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೇ ಈ ಹೇಳಿಕೆಯನ್ನು ಮಂಡಿಸಲಿಕ್ಕೆ ತಮ್ಮ ಅಪ್ಪಣೆಯನ್ನು ಕೇಳುತ್ತಿದ್ದೇನೆ.

ಮಾನ್ಯ ಶಾಸಕರುಗಳಾದ ಸರ್ವಶ್ರೀ ಪಿ.ಜಿ.ಆರ್. ಸಿಂಧ್ಯಾ, ಹೆಚ್. ಏಕಾಂತಯ್ಯ ಆರ್.ವಿ. ದೇಶಪಾಂಡೆ, ಸಿ. ಬೈರೇಗೌಡ ಮತ್ತು ವೈ.ಕೆ. ರಾಮಯ್ಯ ಇವರುಗಳು ತೆರಿಗೆ ರಹಿತ ಸಾರಾಯಿಯನ್ನು ಮಾರುವುದರಿಂದ ಮತ್ತು ಸಾರಾಯಿಯನ್ನು ಪ್ಲಾಸ್ಟಿಕ್ ಚೀಲದಲ್ಲಿ ಮಾರಾಟ ಮಾಡುವುದರಿಂದ ಅಬಕಾರಿ ಆದಾಯ ಸೋರಿ ಹೋಗುತ್ತಿರುವ ಬಗ್ಗೆ ಮತ್ತು ಈ ರೀತಿ ಸೋರಿ ಹೋಗುವ ಆದಾಯವನ್ನು ತಡೆಗಟ್ಟಿದಲ್ಲಿ ಅಬಕಾರಿ ಆದಾಯ ರೂ. 1000 ಕೋಟಿಗಳಿಗೆ ಹೆಚ್ಚಿಸಬಹುದು ಎಂಬ ಬಗ್ಗೆ ಗಮನ ಸೆಳೆಯುವ ಸೂಚನೆಯನ್ನು ಮಂಡಿಸಿರುತ್ತಾರೆ.

ಈ ವರ್ಷ ಅಂದರೆ 1992–93ನೇ ಸಾಲಿನಲ್ಲಿ ಸರ್ಕಾರವು ಎಲ್ಲಾ ಮೂಲಗಳಿಂದ ಅಬಕಾರಿ ಆದಾಯವನ್ನು ರೂ.573 ಕೋಟಿಗಳಷ್ಟು ನಿರೀಕ್ಷಿಸಿದೆ. ಸೋರಿ ಹೋಗುತ್ತಿದೆ ಎಂದು ಹೇಳಲಾದ ಆದಾಯವನ್ನು ತಡೆಹಿಡಿದಾಗ್ಯೂ ಅಬಕಾರಿ ಆದಾಯವು ಈ ವರ್ಷ ರೂ. 1000 ಕೋಟಿಗಳಿಗೆ

ತಲುಪುವುದು ಸಾಧ್ಯವಿಲ್ಲ. ಅಬಕಾರಿ ಆದಾಯವು ಹೆಚ್ಚಿನ ಪ್ರಮಾಣದಲ್ಲಿ ಸಾರಾಯಿ ಅಂಗಡಿಗಳ ಗುತ್ತಿಗೆ ಹಣದ ಸ್ವರೂಪದಲ್ಲಿದ್ದು, ಇದು ಅಬಕಾರಿ ವರ್ಷ ಪ್ರಾರಂಭವಾಗುವ ಮುನ್ನ ಸಾರ್ವಜನಿಕ ಹರಾಜಿನ ಮೂಲಕ ನಿರ್ಧರಿಸಲ್ಪಡುತ್ತದೆ. ಈ ಅಬಕಾರಿ ವರ್ಷದಲ್ಲಿ ಅಂದರೆ 1992–93ರಲ್ಲಿ ಸಾರಾಯಿ ಅಂಗಡಿಗಳ ಗುತ್ತಿಗೆಯಿಂದ ನಿರೀಕ್ಷಿಸಿದ ಅಬಕಾರಿ ಆದಾಯವು ರೂ.394.70 ಕೋಟಿಗಳಷ್ಟಾಗಿರುತ್ತದೆ. ಆದ್ದರಿಂದ ಇದನ್ನು ಬಿಟ್ಟು ಇನ್ನೂ ಹೆಚ್ಚಿನ ಆದಾಯವು ನಿರೀಕ್ಷಿಸುವುದಾದಲ್ಲಿ ಅದು ತೆರಿಗೆ ರಹಿತಸಾರಾಯಿ (ಎನ್.ಡಿ.ಪಿ) ಮಾರಾಟ ತಡೆಯುವುದರಿಂದ ಮತ್ತು ಅಬಕಾರಿ ಗುತ್ತಿಗೆದಾರರುಗಳಿಂದ ತಯಾರಿಸುವ ಸಾರಾಯಿ ಮಾರಾಟದ ವಾಸ್ತವ ಲೆಕ್ಕ ಇಡುವುದರ ಮೂಲಕ ಎಂದು ಹೇಳಬಹುದಾಗಿದೆ. ಈ ರೀತಿಯ ತೆರಿಗೆರಹಿತ ಸಾರಾಯಿ ತಯಾರಿಕೆ ಮತ್ತು ಮಾರಾಟ ಅಥವಾ ಅನಧಿಕೃತವಾಗಿ ತಯಾರಿಸಿದ ಸಾರಾಯಿ ಕಳ್ಳಬಟ್ಟಿ ಸಾರಾಯಿ ಉತ್ಪಾದನೆ ಮಾರಾಟ ತಡೆಗಟ್ಟಲು ಇಲಾಖೆಯು ಸತತವಾದ ಧಾಳಿಗಳನ್ನು ನಡೆಸಿ ಈ ರೀತಿಯ ಕಳ್ಳಬಟ್ಟಿಯ ಸಾರಾಯಿ ಕೇಂದ್ರಗಳನ್ನು ಮತ್ತು ಅಲ್ಲಿ ತಯಾರಿಸಲ್ಪಟ್ಟ ಸಾರಾಯಿಯನ್ನು ನಾಶಪಡಿಸಲಾಗುತ್ತಿದೆ ಹಾಗೂ ಕಾನೂನನ್ನು ಉಲ್ಲಂಘಿಸಿದವರ ವಿರುದ್ಧ ಮೊಕದ್ದಮೆಗಳನ್ನು ಹೂಡಲಾಗುತ್ತಿದೆ. ಅದೇ ರೀತಿ ತೆರಿಗೆರಹಿತ ಸಾರಾಯಿ ಮಾಡುವುದರ ವಿರುದ್ಧ ಸಹಾ ಕ್ರಮ ತಗದುಕೊಳ್ಳಲಾಗುತ್ತಿದೆ. ಈ ರೀತಿಯ ಎಲ್ಲಾ ಕ್ರಮಗಳನ್ನು ತೆಗೆದುಕೊಂಡರೂ ಅಬಕಾರಿ ಆದಾಯವು ರೂ. 1000 ಕೋಟಿಗಳಿಗೆ ತಲುಪಲು ಸಾಧ್ಯವಾಗದು.

ತೆರಿಗೆ ರಹಿತ ಸಾರಾಯಿ ಮಾರಾಟವನ್ನು ತಡೆಗಟ್ಟಲು ಸಾರಾಯಿ ಅಂಗಡಿಗಳನ್ನು ಕಾಲಕಾಲಕ್ಕೆ ತಪಾಸಣೆ ಮಾಡುವುದು ಕಳ್ಳಭಟ್ಟಿ ಕೇಂದ್ರಗಳ ಮಾರಾಟ ಕೇಂದ್ರಗಳ ಮೇಲೆ ದಾಳಿ ಮಾಡುವುದು, ತೆರಿಗೆ ರಹಿತ ಸಾರಾಯಿ, ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯನ್ನು ತಡೆಗಟ್ಟಲು ರಸ್ತೆಗಳ ಮೇಲೆ ಚೆಕ್ – ನಿಗಾ ಮಾಡುವುದರ ಮೂಲಕ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಪ್ಲಾಸ್ಟಿಕ್ (ಪಾಲಿಥಿನ್) ಚೀಲದಲ್ಲಿಯ ಸಾರಾಯಿಯನ್ನು ಅನೇಕ ಕಡೆ ವಶಪಡಿಸಿಕೊಂಡು ಸಂಬಂಧಪಟ್ಟವರ ವಿರುದ್ಧ ಪ್ರಕರಣಗಳನ್ನು ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ. ಇತ್ತೀಚೆಗೆ 100 ಮಿಲಿ ಮೀಟರ್‌ನ ಸುಮಾರು 46,920 ಸಾರಾಯಿ ಪ್ಲಾಸಿಕ್ ಚೀಲಗಳನ್ನು ಇಲಾಖೆಯ ಎನ್‌ಫೋರ್ಸ್‌ಮೆಂಟ್ ವಿಭಾಗದಿಂದ ವಶಪಡಿಸಿಕೊಳ್ಳಲಾಗಿದೆ. ಇದರಿಂದ ತಿಳಿದು ಬರುವುದೇನೆಂದರೆ ಇಲಾಖೆಯ ಅಧಿಕಾರಿಗಳು ಈ ರೀತಿಯ ಸಾರಾಯಿಯ ಮಾರಾಟವನ್ನು ತಡೆ ಹಿಡಿಯಲು ಎಲ್ಲಾ ರೀತಿಯ ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಎಂದು ಹೇಳಬಹುದಾಗಿದೆ.

ತೆರಿಗೆ ರಹಿತ ಸಾರಾಯಿ ತಯಾರಿಕೆ ಮಾರಾಟವನ್ನು ತಡೆಗಟ್ಟಲು ಈ ರೀತಿಯ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಂಡ ಕಾರಣ 1992ರ ಡಿಸೆಂಬರ್ ತಿಂಗಳಲ್ಲಿ ಸುಮಾರು 47 ಲಕ್ಷ ಲೀಟರ್ ಸಾರಾಯಿ ಮಾರಾಟದ ದಾಖಲೆಯನ್ನು ತಲುಪಿದೆ. ಇದು ಈ ತಿಂಗಳಲ್ಲಿ ಅಂದರೆ, ಡಿಸೆಂಬರ್ ತಿಂಗಳಲ್ಲಿ ದೇಶದಲ್ಲಿ ಇತ್ತೀಚೆಗೆ ಸಂಭವಿಸಿದ ಗಲಭೆಯ ಕಾರಣ ಸಾರಾಯಿ ಅಂಗಡಿಗಳನ್ನು 8–15 ದಿನಗಳವರೆಗೆ ಮುಚ್ಚಿದ್ದಾಗ್ಯೂ ಸಾಧಿಸಿದ ಮಾರಾಟದ ಪ್ರಗತಿಯಾಗಿದೆ. 1992ರ ಜುಲೈನಿಂದ ನವೆಂಬರ್ ತಿಂಗಳುಗಳಲ್ಲಿ ಮಾರಾಟವಾದ ಸಾರಾಯಿ ವಿವರಗಳು ಈ ಕೆಳಗಿನಂತೆ ಇರುತ್ತದೆ.

1.	ಜುಲೈ	1992: 43.44 ಲಕ್ಷ ಲೀಟರ್
2.	ಆಗಸ್ಟ್	1992: 44.08 ''
3.	ಸೆಪ್ಟಂಬರ್	1992: 48.38 ''
4.	ಅಕ್ಟೋಬರ್	1992: 51.94 ''
5.	ನವೆಂಬರ್	1992: 51.78 ''

ಮೇಲಿನ ವಿವರಗಳನ್ನು ನೋಡಲಾಗಿ ಅಬಕಾರಿ ಆದಾಯವನ್ನು ಹೆಚ್ಚಿಸುವಲ್ಲಿ ಇಲಾಖೆ ಸರ್ವ ಪ್ರಯತ್ನ ಮಾಡುತ್ತಿದೆ ಎಂಬುದನ್ನು ಸೂಚಿಸುತ್ತದೆ. ಇಲಾಖೆಯ ಆದಾಯವನ್ನು

ಹೆಚ್ಚಿಸಲು ಮತ್ತು ತನಿಖಾದಳ ಬಲಪಡಿಸಲು ಇಲಾಖೆಯನ್ನು ಪುನರ್ ಸಂಘಟಿಸಲೂ ಸಹಾ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

† ಶ್ರೀ ಸಿ. ಬೈರೇಗೌಡ:– ಅಧ್ಯಕ್ಷರೇ ನಿನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆ. ಇದನ್ನು ತಡೆಗಟ್ಟುವುದಕ್ಕೆ ಆಗುತ್ತಿಲ್ಲ, ಕಾಲಾವಕಾಶ ಬೇಕು ಎನ್ನತಕ್ಕದ್ದನ್ನು ಒಪ್ಪಿಕೊಂಡಿದ್ದಾರೆ. ಅಲ್ಲಿ ಹೇಳಿಕೆ ಕೊಟ್ಟಿರುವುದಕ್ಕೂ ಇಲ್ಲಿನ ಹೇಳಿಕೆಗೂ ಕೂಡ ಬಹಳ ಅಜಗಜಾಂತರ ವ್ಯತ್ಯಾಸ ಇದೆ. ಇದಕ್ಕೆ ಕಾರಣ ಏನು ಎಂದು ನನಗೆ ಅರ್ಥವಾಗುತ್ತಿಲ್ಲ. ಇವತ್ತು ಇಲಾಖೆ ಜಾತಕ ಎಲ್ಲಾ ನನ್ನ ಹತ್ತಿರ ಇದೆ, ಸುಮಾರು 10–15 ವರ್ಷಗಳಿಂದ ಎಲ್ಲೆಲ್ಲಿ ಏನೇನು ನಡೆದಿದೆ ಎನ್ನತಕ್ಕಂಥ ಜಾತಕ ಎಲ್ಲಾ ನನ್ನ ಹತ್ತಿರ ಇದೆ. ಸ್ವಾಮಿ ಏಪ್ರಿಲ್ 91ರಲ್ಲಿ ನಮ್ಮ ರಾಜ್ಯದಲ್ಲಿ ಮಾರಾಟ ಆದಂಥ ಸಾರಾಯಿ 62.64 ಲಕ್ಷ ಲೀಟರ್. ಆದೇ ಈಗ 92 ಸೆಪ್ಟೆಂಬರ್‌ಗೆ ಎಷ್ಟಕ್ಕೆ ಬಂದಿದೆ ಎಂದರೆ ಕೇವಲ 48.38 ಲಕ್ಷ ಲೀಟರ್‌ಗೆ ಇಳಿದಿದೆ. ಇದು ಏನು ತೋರಿಸುತ್ತದೆ ಎಂದರೆ ಈ ಇಲಾಖೆಯಲ್ಲಿ ಎಷ್ಟರಮಟ್ಟಿಗೆ ಭ್ರಷ್ಟಾಚಾರ ಇದೆ, ಕೆಳಮಟ್ಟದಿಂದ ಹಿಡಿದು ಮೇಲೆ ಮಟ್ಟದವರೆಗೂ ಅತೀ ಮೇಲ್ ಮಟ್ಟ ಮಂತ್ರಿಗಳ ಮಟ್ಟದವರೆಗೂ ಕೂಡ ಭ್ರಷ್ಟಾಚಾರ ತುಂಬಿ ತಾಂಡವಾಡುತ್ತಿದೆ ಎನ್ನುವುದಕ್ಕೆ ಇದೇ ಒಂದು ನಿದರ್ಶನ. ಐವತ್ತು ಪುಟದ ಅಂಕಿ ಅಂಶಗಳು ನನ್ನ ಹತ್ತಿರ ಇವೆ. ಅವೆಲ್ಲವನ್ನು ಬಿಚ್ಚುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಉದಾಹರಣೆ ಕೊಟ್ಟಿದ್ದೇನೆ. ಏಪ್ರಿಲ್ 1991ರಲ್ಲಿ ನಮ್ಮ ರಾಜ್ಯದಲ್ಲಿ ಸುಮಾರು 62.64 ಲಕ್ಷ ಲೀಟರ್ ಮಾರಾಟವಾಗುತ್ತಿದ್ದು ಸೆಪ್ಟೆಂಬರ್ 1992ಕ್ಕೆ 48.38ಕ್ಕೆ ಇಳಿದಿದೆ. ಮಾನ್ಯ ಅಧ್ಯಕ್ಷರೇ, ಈ ಸಾರಾಯಿ ಯಾವ ರೀತಿ ಇಳಿಯುತ್ತದೆ, ಕನ್‌ಸಂಪಶನ್ ಎನ್ನತಕ್ಕಂತದು, ಇದು ವಾಸ್ತವಾದಂಥ ಕನ್‌ಸಂಪಶನ್ ಅಲ್ಲ. ಬೆಂಗಳೂರಿನದು ಒಂದು ಉದಾಹರಣೆ ಕೊಟ್ಟರೆ ಸಾಕು ಎಂದು ನನಗೆ ಅನ್ನಿಸುತ್ತದೆ. ಬೆಂಗಳೂರಿನಲ್ಲಿ ಇವರ ಪ್ರಕಾರವೇ ಸುಮಾರು 9 ಲಕ್ಷ ಚಿಲ್ಲರೆ ಲೀಟರ್ ಈಗ ಕನ್‌ಸಂಪಶನ್ ಆಗುತ್ತಿದೆ ಎನ್ನುವುದನ್ನು ತಾವು ಒಪ್ಪುತ್ತೀರಿ, ನಾವು ಇವರಿಗೆ ಸವಾಲ್ ಹಾಕುವುದಕ್ಕೆ ಇಷ್ಟಪಡುತ್ತೇನೆ. ಈ ಸರ್ಕಾರಕ್ಕೆ ಬೆಂಗಳೂರು ನಗರ ಒಂದರಲ್ಲೆ ಸುಮಾರು 20 ಲಕ್ಷ ಲೀಟರ್ ಸಾರಾಯಿ ಮಾರಾಟವಾಗುತ್ತಾ ಇದೆ. It is challenge to this Government. ಸುಮಾರು 11 ಲಕ್ಷ ಲೀಟರ್ ಸಾರಾಯಿ ಏನು ಇದೆ ಆ ಸಾರಾಯಿಯನ್ನು ಈ ಕಂಟ್ರಾಕ್ಟದಾರರು ತಮ್ಮದೆ ಆದಂಥ ವಿಧಾನದಲ್ಲಿ ತಯಾರು ಮಾಡುತ್ತಾರೆ. ಒಂದು ಇದರ ಟೆಕ್ನಿಕಲ್ ಮ್ಯಾನ್ಯುಯಲ್ ಪ್ರಕಾರ ಒಂದು ಲೀಟರ್ ರೆಕ್ಟಿಫೈಡ್ ಸ್ಪಿರಿಟ್‌ಗೆ ಒಂದೂವರೆ ಲೀಟರ್ ನೀರನ್ನು ಬೆರೆಸಿ ಆದನ್ನು 15 ದಿವಸ ಮೆಚೂರು ಮಾಡಬೇಕು. ಆದನ್ನು ಇವರು 15 ದಿವಸ ಮೆಚೂರು ಮಾಡುತ್ತಾ ಇಲ್ಲ. 15 ಗಂಟೆಯೂ ಮೆಚೂರು ಮಾಡುತ್ತಾ ಇಲ್ಲ, 15 ನಿಮಿಷವೂ ಕೂಡ ಬಿಡುತ್ತಿಲ್ಲ. ರೆಕ್ಟಿಫೈ ಸ್ಪಿರಿಟ್‌ಗೆ ನೀರು ಬೆರಸುತ್ತಾರೆ. ಆದನ್ನು ಹಾಗೆಯೇ ಸ್ಯಾಚೆಟ್‌ನಲ್ಲಿ ಮಾರಾಟ ಮಾಡುತ್ತಿದ್ದಾರೆ. ಆದು ಟೆಕ್ನಿಕಲ್ ಮ್ಯಾನ್ಯುಯಲ್ ಪ್ರಕಾರ ನಾನು ಹೇಳತಕ್ಕಂಥದ್ದು. ಆದರೆ ವಾಸ್ತವವಾಗಿ ಎಷ್ಟು ಬೆರಸುತ್ತಿದ್ದಾರೆ, ಎಂದರೆ ಅಧ್ಯಕ್ಷರೇ ಒಂದು ಲೀಟರ್ ರೆಕ್ಟಿಫೈ ಸ್ಪಿರೀಟ್‌ಗೆ ಸುಮಾರು ಎರಡುವರೆಯಿಂದ 3 ಲೀಟರ್ ನೀರನ್ನು ಬೆರಸುತ್ತಾರೆ. ರೆಕ್ಟಿಫೈಡ್ ಸ್ಪಿರೀಟ್ ಸಾರಾಯಿ ಮಾರಾಟಗಾರರಿಗೆ ಕೇವಲ 6 ರೂಪಾಯಿ ಮಾತ್ರ ಬೆಲೆ ಇವತ್ತು ನಿಗದಿ ಮಾಡಿರುವಂಥದ್ದು. ಇವತ್ತು 65–74 ರೂಪಾಯಿವರೆಗೆ ಏನು ಇದೆ ಮಿನಿಮಮ್, ಮ್ಯಾಕ್ಸಿಮಮ್ ಎಂದು ಮಾಡಿದ್ದಾರೆ. 6 ಚಿಲ್ಲರೆ ರೂಪಾಯಿಗೆ ಪಡೆದಂಥ ರೆಕ್ಟಿಫೈಡ್ ಸ್ಪಿರಿಟ್, ಇದರ ಮಾರಾಟದ ಬೆಲೆ ಎಷ್ಟಕ್ಕೆ ಹೋಗುತ್ತದೆ ಎಂದರೆ ಸುಮಾರು 310 ರೂಪಾಯಿ ಹೋಗುತ್ತದೆ. 6 ರೂಪಾಯಿನಿಂದ ಆದರ ಮಾರಾಟದ ಬೆಲೆ 310 ರೂಪಾಯಿಗೆ ಹೋಗುತ್ತದೆ. ಅವರು ಕೇಳಬಹುದು, ಅವರು ಕಿಸ್ತು ಕಟ್ಟುತ್ತಾರಲ್ಲ, ಮಂತ್ಲಿ ರೆಂಟಲ್ ಕಟ್ಟುತ್ತಾರಲ್ಲ ಎಂದು ಮಂತ್ಲಿ ರೆಂಟಲ್ ಯಾವ ಆಧಾರದ ಮೇಲೆ ಕ್ಯಾಲ್‌ಕ್ಯುಲೇಟ್ ಮಾಡುತ್ತಾರೆ ಅಂದರೆ, ಹೋದ ವರ್ಷದ ಕನ್‌ಸಂಶನ್ ಎಷ್ಟಿದೆ ಅದರ ಆಧಾರದ ಮೇಲೆ ಮಾಡುತ್ತಾರೆ. ಇದು ಎಷ್ಟು ಪರ್ಸೆಂಟೇಜ್

ಆಗುತ್ತದೆ ಎಂದರೆ ಹೆಚ್ಚು ಸುಮಾರು 3 ಸಾವಿರ ಚಿಲ್ಲರೆ ಪರ್ಸ್‌ಂಟೇಜ್ ಲಾಭ ಪಡೆಯುತ್ತಿರತಕ್ಕಂಥದ್ದು ನಡೆಯುತ್ತದೆ. ಇದೆಲ್ಲಾ ಸರ್ಕಾರಕ್ಕೆ ಗೊತ್ತಿಲ್ಲಾ ಎಂದಲ್ಲ. ಸರ್ಕಾರಕ್ಕೆ ಖಂಡಿತವಾಗಿಯೂ ಕೂಡ ಗೊತ್ತಿದೆ. ಇದೆಲ್ಲವೂ ಕೂಡ ಮೂಗಿನ ನೇರದಲ್ಲಿ ನಿಮ್ಮ ಕಣ್ಣಿನ ಎದುರಿನಲ್ಲಿ ನಡೆಯುತ್ತಿದೆ. ಏನು ಇಲ್ಲ ಸ್ವಾಮಿ, ವಿಧಾನಸಭೆಯ ಹತ್ತಿರ ಬೆಳಿಗ್ಗೆ ಬಂದು ನಿಂತುಕೊಳ್ಳಿರಿ, ನಿಮಗೆ ತೋರಿಸಿ ಕೊಡುತ್ತೇನೆ. ಎಷ್ಟು ಲಾರಿ ಸಾರಾಯಿ ಇಲ್ಲಿಂದ ಸಾಚೆಕಟ್ಟಿನಲ್ಲಿ ತುಂಬಿಸಿ ನಿಮ್ಮ ವಿಧಾನಸೌಧದ ಎದುರುಗಡೆ ಇದೇ ರಸ್ತೆಯ ಮುಂದೆ ಹೋಗುತ್ತಿರುವುದನ್ನು ತೋರಿಸಿಕೊಡುತ್ತೇನೆ. ನೀವು ನನ್ನ ಜೊತೆಯಲ್ಲಿ ನಿಂತು ಕೊಳ್ಳುತ್ತೀರಾ? ಬರುವುದಕ್ಕೆ ತಯಾರಿದ್ದೀರಾ, ಎನು ಬೇಡ ಈಗ ಬನ್ನಿ. ಬೆಂಗಳೂರು ನಗರದಲ್ಲಿ ಎಲ್ಲೆಲ್ಲಿ ಏನೇನೂ ನಡೆಯುತ್ತಾ ಇದೆ ಎನ್ನತಕ್ಕಂತದ್ದನ್ನು ನಾನು ತೋರಿಸಿಕೊಡುತ್ತೇನೆ. ಕ್ರಮ ತೆಗೆದುಕೊಳ್ಳುತ್ತೀರಾ? ಇವತ್ತು ಸೌತ್ ಎಂಡ್ ಸರ್ಕಲ್‌ಗೆ ನಡೆಯಿರಿ, ಅಲ್ಲಿ ಏನು ನಡೆಯುತ್ತದೆ ಎಂದು ನೋಡಿ. ಅಲ್ಲಿ ಒಂದು ದೊಡ್ಡ ಕೋಟೆ ಕಟ್ಟಿದ್ದಾರೆ ಈ ಅಬಕಾರಿ ಕಂಟ್ರಾಕ್ಟರ್ಸ್ ನರ ಮಾನವನನ್ನು ಅಲ್ಲ, ನೊಣವನ್ನೂ ಕೂಡ ಒಳಗಡೆ ಬಿಡುವುದಿಲ್ಲ. ಅದೊಂದು ಫಾಲ್ಟ್ರೆಸ್ ಆಗಿ ಕನ್‌ಫರ್ಟ್ ಮಾಡಿರತಕ್ಕಂಥದ್ದು. 14 ಪ್ಲಾಸ್ಟಿಕ್ ಚೀಲಗಳಲ್ಲಿ ಸಾರಾಯಿಯನ್ನು ತುಂಬಿಸತಕ್ಕ 14 ಸಾಚೆಟ್ ಮಿಷಿನ್ಸ್ ನಡೆಯುತ್ತಿದೆ. ಮಾನ್ಯ ಅಧ್ಯಕ್ಷರೇ, ಸರ್ಕಾರಕ್ಕೆ ಬರುವಂತಹ ಆದಾಯವನ್ನು ಕೂಡ ವಾಪಸ್ಸ್ ಕೊಡುತ್ತೇವೆಂದು ಅವರೇ ಒಪ್ಪಿದ್ದಾರೆ. ಸುಮಾರು 139 ಕೋಟಿ ರೂಪಾಯಿ ಇವತ್ತಿನ ದಿವಸ ಸರ್ಕಾರಕ್ಕೆ ಬರಬೇಕಾದ ಆದಾಯವನ್ನು ಉಳಿಸಿಕೊಂಡಿದ್ದಾರೆ. ಸರ್ಕಾರದ .ದುಡ್ಡಲ್ಲಿ ಅವರು ಲಾಭ ಪಡೆಯುವುದಕ್ಕೆ ನಾವು ಅವಕಾಶವನ್ನು ಕೊಡುವುದಿಲ್ಲ ಎನ್ನುವ ಮಾತನ್ನು ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದರೆ ಇವತ್ತು ನಿಮ್ಮ ಬಂಡವಾಳ ಈಚೆಗೆ ಬರುತ್ತಿದೆ. ನಿನ್ನೆ ನಿಮ್ಮ ಬಂಡವಾಳ ಕೌನ್ಸಿಲ್‌ನಲ್ಲಿ ಈಚೆಗೆ ಬಂದಿದೆ. ನೀವು ಏನು ಅವರಿಗೆ ಇಷ್ಟೊಂದು ಔದಾರ್ಯ ತೋರಿಸಬೇಕಾದರೆ ಕಾರಣ ಏನು? ಈ ಸರ್ಕಾರ ಆ ಸರ್ಕಾರ ಅಲ್ಲ, ಎಲ್ಲಾ ಸರ್ಕಾರಗಳನ್ನು ಕೂಡ ತಮ್ಮ ಬುಟ್ಟಿಗೆ ಹಾಕಿಕೊಂಡಿದ್ದರು. ಅದೇ ತರಹ ಶ್ರೀಮಾನ್ ವೀರಪ್ಪ ಮೊಯಿಲಿಯವರನ್ನು ತಮ್ಮ ಬುಟ್ಟಿಗೆ ಹಾಕಿಕೊಂಡಿದ್ದಾರೆ ಎನ್ನತಕ್ಕಂಥ ನನ್ನ ಗುರುತರವಾದ ಆರೋಪವನ್ನು ನಾನು ಮಾಡಲೇಬೇಕಾಗುತ್ತದೆ. ಏಕೆಂದರೆ ಇದರಲ್ಲಿ ಒಂದು ಕೋಟಿ, ಎರಡು ಕೋಟಿ ಆದಾಯ ಸೋರಿ ಹೋಗುತ್ತಾ ಇಲ್ಲ, ಸಾವಿರ ಕೋಟಿ ಮೇಲೆ ಸೋರಿ ಹೋಗುತ್ತಿದೆ. ಸಾವಿರ ಕೋಟಿ ಆಗುವುದಿಲ್ಲ ಎಂದು ಹೇಳುತ್ತಿದ್ದೀರಿ ನನಗೆ ವಹಿಸುತ್ತೀರಾ ಜವಾಬ್ದಾರಿ, ನಾನು ಸಾವಿರ ಕೋಟಿ ತೋರಿಸಿಕೊಡ್ತೀನಿ, ತಯಾರಿದ್ದೀರಾ? ಹೇಳಿ ನೋಡೋಣ. ಮಾನ್ಯ ಬಂಗಾರಪ್ಪನವರ ಸರ್ಕಾರ ಇರಬಹುದು ಅಥವಾ ಅದಕ್ಕೆ ಹಿಂದಿದ್ದ ಸರ್ಕಾರಗಳು ಏನಿತ್ತೋ ಅವೆಲ್ಲ ಏನು ಮಾಡುತ್ತಿದ್ದವೋ ಅದನ್ನೇ ನೀವೂ ಮಾಡುತ್ತಿದ್ದೀರಿ. ಐಎಂಎಫ್‌ಎಲ್ ಕಂಟ್ರೋಲ್ ಮಾಡಿದ್ದಾರೆ, ಇಲ್ಲ ಎಂದು ನಾನು ಹೇಳುವುದಿಲ್ಲ, ಬಹಿರಂಗವಾಗಿ ನಾನು ಮೆಚ್ಚುಗೆ ಸೂಚಿಸಿ, ಪತ್ರದ ಮೂಲಕವೂ ಅವರಿಗೆ ಮೆಚ್ಚಿಗೆ ಸೂಚಿಸಿ ನಾನು ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆಲ್ಲಿಗೆ ನಿಲ್ಲಿಸಿದಿರಿ, ಸಂತೋಷ, ಅಷ್ಟರಮಟ್ಟಿಗೆ ನಿಮಗೆ ಅಭಿನಂದನೆ. ಆದರೆ ಈ ಸಾರಾಯಿಂದ ನಮಗೆಷ್ಟು ಆದಾಯ ಬರುತ್ತಿದೆ ಎಂದರೆ 1992–93ಕ್ಕೆ 573 ಕೋಟಿ, ಇವರ ಅಂದಾಜಿನ ಪ್ರಕಾರವೇ, ಸಾರಾಯಿ ಮಾರಾಟದಿಂದ ಸರ್ಕಾರಕ್ಕೆ ಬರುವ ಅಂದಾಜು 394.79 ಕೋಟಿ ಎಂದು ತಮ್ಮ ಹೇಳಿಕೆಯಲ್ಲೂ ಒಪ್ಪಿಕೊಂಡಿದ್ದೀರಿ. ಅಂದರೆ ಸುಮಾರು ಶೇಕಡ 75ರಷ್ಟು ಆದಾಯ ನಿಮಗೆ ಸಾರಾಯಿಯಿಂದ ಬರುತ್ತಿದೆ. ಐಎಂಎಫ್‌ಎಲ್‌ನಿಂದ ಬರುವುದು ಶೇಕಡ 25 ಮಾತ್ರ. ಶೇಕಡ 75ರಷ್ಟುನ್ನು ಬಿಟ್ಟಿದ್ದೀರಿ, ಯಾವ ಕಾರಣದಿಂದ ಎಂದು ನನಗೆ ಅರ್ಥವಾಗುವುದಿಲ್ಲ. ಆದ್ದರಿಂದ ವೀರಪ್ಪ ಮೊಯಿಲಿಯವರ this is scandal No.1 of 1993. ಈ ಹೊಸ ವರ್ಷದ ಈ ಸರ್ಕಾರದ ಕೊಡುಗೆ ಈ ರಾಜ್ಯಕ್ಕೆ ಸಾರಾಯಿಯನ್ನು ಯಥೇಚ್ಛವಾಗಿ ಹೊಳೆ ಹರಿಸುತ್ತಾ ಇರತಕ್ಕಂಥ ವಿಚಾರ ಇದು. Scandal No.1 of 93, Scandal No.1 of

Mr.Veerappa Moily as Head of the Government. ಈ ಸ್ಕಾಂಡಲಸ್ ಕೆಲಸ ಏಕೆ ನಿಲ್ಲಿಸುವುದಿಲ್ಲ? ನೀವು ಒಳ್ಳೆಯ ಕೆಲಸ ಮಾಡಿದಾಗ ಅದನ್ನು ಬಹಿರಂಗವಾಗಿ ಹೇಳಿದ್ದೇನೆ. ಆದರೆ ಇವತ್ತು ಆ ನಂಬಿಕೆ ನನಗೆ ಉಳಿದಿಲ್ಲ ಎಂದು ಹೇಳಲೇಬೇಕಾಗಿದೆ. ಇವತ್ತು ಸಬೂಬು ಹೇಳುವ ಅವಶ್ಯಕತೆ ನಿಮಗಿಲ್ಲ. ಇನ್ನೊಂದು ವಿಷಯ ಹೇಳುತ್ತೇನೆ ಒಂದೇ ನಿಮಿಷದಲ್ಲಿ ಇವರಿಗೆ ಸಾರಾಯಿಯಲ್ಲಿ ಸೋರಿಕೆ ಆಗುತ್ತಿರುವುದನ್ನು, ಸೆಕೆಂಡ್ಸನ್ನು ನಿಲ್ಲಿಸುವುದಕ್ಕೆ ಸಾಧ್ಯವಿದೆ. ಮುಖ್ಯಮಂತ್ರಿಗಳ ಸ್ಥಾನದಲ್ಲಿ ಕುಳಿತಿರತಕ್ಕವರು ಈ ಸದನದಲ್ಲಿ ಹೇಳಲಿ, ನಾವು ಈ ನಿಮಿಷದಿಂದ ಸಾರಾಯಿಯಲ್ಲಿ ಸೆಕೆಂಡ್ಸನ್ನು ಬಿಡುವುದಿಲ್ಲ ಎಂದು ಹೇಳಲಿ, ತಕ್ಷಣ ನಿಲ್ಲುತ್ತದೆ. ಒಂದು ನಿಮಿಷದಲ್ಲಿ ನಿಲ್ಲಿಸುವುದಕ್ಕೆ ಸಾಧ್ಯವಿದೆ. ಈ ನಾಟಕ, ಬೂಟಾಟಿಕೆ ಬೇಕಾಗಿಲ್ಲ, ನೇರವಾದ ಹೇಳಿಕೆಯನ್ನು ನೀವು ರಾಜ್ಯದ ಜನತೆ ಮುಂದೆ ಕೊಡಬೇಕೆಂದು ನಾನು ಆಗ್ರಹಪಡಿಸುತ್ತೇನೆ.

ಅಧ್ಯಕ್ಷರು:- ಈಗ ನೀವು ಕುಳಿತುಕೊಂಡರೆ ಅವರು ಹೇಳುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಬೈರೇಗೌಡರಿಗೆ ಈ ಸಾರಾಯಿಯಲ್ಲಿದ್ದಷ್ಟು ಅನುಭವ ನನಗಂತೂ ಇಲ್ಲ ಅದನ್ನು ಪ್ರಥಮವಾಗಿ ನಾನು ಒಪ್ಪಿಕೊಳ್ಳಬೇಕು ಏಕೆಂದರೆ ಅವರು ಸಾಕಷ್ಟು ಅಧ್ಯಯನ ಮಾಡಿದ್ದಾರೆ. ಈ ಬಗ್ಗೆ ಯಾವಾಗಲೂ ಅಧಿಕಾರವಾಣಿಯಿಂದ ಮಾತಾಡುವವರು ಬೈರೇಗೌಡರೇ.

ಅಧ್ಯಕ್ಷರು:- ಬ್ಲೂಫ್ಲೆಲನ್ನೇ ತಯಾರು ಮಾಡಿದ್ದಾರೆ. ಅದನ್ನು ಸೈಕ್ಲೊಸ್ಟೈಲ್ ಮಾಡಿ ನನಗೊಂದು ಕಳಿಸಿಕೊಡಿ ನೋಡೋಣ.

ಶ್ರೀ ಸಿ. ಬೈರೇಗೌಡ:- ಕೊಡುವುದಕ್ಕೆ ಸರ್ಕಾರಕ್ಕೆ ಶಕ್ತಿ ಇಲ್ಲದೇ ಇದ್ದರೆ ನಾನು ತಮಗೆ ಈಗಲೇ ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಈಗ ಇಡೀ ಇಲಾಖೆಯ ಜಾತಕ ಕೂಡ ಅವರ ಕೈಯಲ್ಲೇ ಇದೆ. ಆದ್ದರಿಂದ ನಾನೀಗ ಅವರೊಡನೆ ಸಮಾಲೋಚನೆ ಮಾಡಿ ಏನು ಜಾತಕ, ಕುಂಡಲ ಹೇಗಿದೆ, ರಾಹು ಎಲ್ಲಿದೆ, ಕೇತು ಎಲ್ಲಿದೆ, ಶನಿ ಎಲ್ಲಿದೆ ಎಂದು ಹುಡುಕಲಿಕ್ಕೆ...

ಶ್ರೀ ಸಿ. ಬೈರೇಗೌಡ:- ಅವೆಲ್ಲವನ್ನೂ ಬೇರೆ ಕಡೆ ಏಕೆ ಹುಡುಕುವುದಕ್ಕೆ ಹೋಗುತ್ತೀರಿ. ಇದೆಲ್ಲವೂ ನಿಮ್ಮ ಸ್ಥಾನದಲ್ಲೇ ಇವೆ. ಹುಡುಕುವುದು ಅನಾವಶ್ಯಕ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಈಗ ಶನಿ ಅದರ ಮನೆಯಲ್ಲಿದೆ, ಇವರ ಮನೆಗೆ ಬರಬಾರದು ಅಂತ.

ಶ್ರೀ ಎಂ. ವೀರಪ್ಪ ಮೊಯಿಲಿ:- ಆದ್ದರಿಂದ ನಾನು ನಿಮ್ಮ ಜೊತೆ ಮಾತಾಡುತ್ತೇನೆ. ಏಕೆಂದರೆ ಜಾತಕ ನಿಮ್ಮ ಕೈಲಿದೆ, ನನ್ನ ಕೈಲಿಲ್ಲ, ಆದ್ದರಿಂದ ಜ್ಯೋತಿಷ್ಯ ತಾವು ಹೇಳಬೇಕಾಗುತ್ತದೆ, ಆದರೆ ಕುಂಡಲಿ ಇಡುವ ಮೊದಲೇ ತಾವು ಈಗಲೇ ಎಲ್ಲಾ ಹೇಳಿಬಿಟ್ಟರೆ! ಏಕೆಂದರೆ ಎಲ್ಲಾ ಬುಟ್ಟಿಯಲ್ಲಿ ಹಾಕಿಬಿಟ್ಟಿದ್ದೇನೆ ಎಂದು ಹೇಳಿಬಿಟ್ಟಿದ್ದೀರಿ, ಯಾವ ತರಹದ ಬುಟ್ಟಿಯಲ್ಲಿ ಹಾಕಿದ್ದೀರಿ ತಮ್ಮ ಹತ್ತಿರ ಅದನ್ನೂ ಕೇಳುತ್ತೇನೆ ವಿಚಾರ ಮಾಡುತ್ತೇನೆ. ತಾವು ಹೇಳಿದಿರಿ, ಅಬಕಾರಿ 1 ಸಾವಿರ ಕೋಟಿ ವಸೂಲಿ ಮಾಡುವುದಕ್ಕೆ ಆಗುತ್ತದೆ, ಎಂದು ಏನು ಸೂಚನೆ ಕೊಟ್ಟಿದ್ದೀರಿ ಅದನ್ನು ಖಂಡಿತವಾಗಿ ನೋಡುತ್ತೇನೆ. ಸರ್ಕಾರದ ಖಜಾನೆಗೆ ಹಣ ಬರುವುದಿದ್ದರೆ ನಾವು ಅದನ್ನು ಸ್ವಾಗತ ಮಾಡುತ್ತೇವೆ. ತಾವು ಏನು ಸಲಹೆಗಳನ್ನು ಕೊಟ್ಟರೂ ನಾವು ಸಲಹೆಗಳನ್ನು ಸ್ವೀಕಾರ ಮಾಡುತ್ತೇವೆ. ಆದ್ದರಿಂದ ತಮ್ಮ ಜೊತೆಯಲ್ಲಿ ನಾನು ಪ್ರತ್ಯೇಕವಾಗಿ ಮಾತನಾಡುತ್ತೇನೆ. ತಮಗೆ ಗೊತ್ತಿದೆ, ತಾವು ಇದರ ಬಗ್ಗೆ ಸಾಕಷ್ಟು ಅಧ್ಯಯನವನ್ನು ಮಾಡಿದ್ದೀರಿ. ಅದಕ್ಕೆ ಅಲ್ಲಿ ಆ ಸದನದಲ್ಲಿ ನಾನು ಹೇಳಿದ್ದುದು ಇಷ್ಟೆ. ಏಕೆಂದರೆ ತಮಗೆ ಗೊತ್ತಿದೆ, ನಾವು

ಎಲ್ಲೆಲ್ಲಿ ಹೇಗೆ ಎಂದು. ಈ ಐ.ಎಂ.ಎಫ್.ಎಲ್‌ನ್ನು ನಾವು ಕೂಡಲೇ ಹಿಡಿಯಬಹುದು. ತಕ್ಷಣ ಎಲ್ಲೆಲ್ಲಿ ಅದು ಮ್ಯಾನ್ಯುಫ್ಯಾಕ್ಚರ್ ಆಗುತ್ತದೆ. ಅದು ಕೆಲವೇ ಐಡೆಂಟಿಫೈಡ್ ಯೂನಿಟ್ಸ್ ಇರುತ್ತದೆ. ಆದರೆ ಈ ಸಾರಾಯಿ ಎಲ್ಲೆಲ್ಲಿ ಉತ್ಪಾದನೆಯಾಗುತ್ತದೆ ಎನ್ನುವುದು ತಮಗೂ ಕೂಡ ಗೊತ್ತಿದೆ. ಎಲ್ಲೆಲ್ಲಿ ಉತ್ಪಾದನೆಯಾಗುತ್ತದೆ ಎನ್ನುವುದು ಅಷ್ಟು ತಮಗೆ ಗೊತ್ತಿದೆ. ಅದು ಐಡೆಂಟಿಫೈಡ್ ಫ್ಯಾಕ್ಟರಿಯಲ್ಲಿ ಅದು ಉತ್ಪಾದನೆಯಾಗುವುದಿಲ್ಲ. That is manufactured every where. ತಾವು ಹೇಳಿದ ಹಾಗೆ ಅದನ್ನು ಆಕ್ರಮವಾಗಿ ಮಾಡುತ್ತಾರೆ, ಸೌತ್ ಎಂಡ್ ಸರ್ಕಲ್‌ನಲ್ಲಿ ಮಾಡುತ್ತಾರೆಂದು ಹೇಳಿದ್ದೀರಿ, ಯಾವ ಯಾವ ಸರ್ಕಲ್‌ನಲ್ಲಿ, ಯಾವ ಯಾವ ಓಣಿಯಲ್ಲಿ, ಯಾವ ಯಾವ ಮೂಲೆಯಲ್ಲಿ ಹಾಕಿದ್ದಾರೆ ಎಂದು ತಮಗೆ ಗೊತ್ತಿದೆ. ಅದೊಂದು ವ್ಯಾಪಕವಾದಂಥ ಜಾಲ ತಾವು ಹೇಳಿದ ಹಾಗೆ. ಆದ್ದರಿಂದ ಈ ವ್ಯಾಪಕವಾದಂಥ ಜಾಲವನ್ನು ಪತ್ತೆ ಹಚ್ಚಲು ನಾನು ಏನು ಮಾಡುತ್ತೇನೆಂದು ಹತ್ತು-ಹದಿನೈದು ದಿವಸ ಕಾದು ನೋಡಿ ಎಂದು ಆ ಸದನದಲ್ಲಿ ಹೇಳಿದ್ದುದು. ಏಕೆಂದರೆ ನಮಗೆ ಈ ಬಾಟ್ಲಿಂಗ್ ಕಂಟ್ರಾಕ್ಟ್ ಇದು ಬಹಳ ಸ್ವಲ್ಪ ಆಳವಾಗಿ ಹೋಗಿದೆ. ಈ ಬೇರು ಏನಿದೆ, ಈ ಸಾರಾಯಿ ಬೇರು ಬಹಳ ಆಳ ಆಗಿದೆ. ಅದನ್ನು ಹುಡುಕುವುದಕ್ಕೆ ಏನೂ ಕಷ್ಟ ಇಲ್ಲ. ಅದನ್ನು ನಾವು ಹುಡುಕುತ್ತೇವೆ. ಆ ಬೇರನ್ನು ನಾವು ಕಿತ್ತು ಬಿಸಾಡುತ್ತೇವೆ. ತಾವು ಬೈರೇಗೌಡರು ಮಾತ್ರ ಸ್ವಲ್ಪ ಸಮಾಧಾನವಾಗಿರಬೇಕು ಅಷ್ಟೆ. ನಾನು ಆ ಸದನದಲ್ಲಿಯೂ ಕೂಡ ಹೇಳಿದ್ದೇನೆ. ಹತ್ತು-ಹದಿನೈದು ದಿವಸ ನೀವು ಕಾದು ನೋಡಿ, ನಾವು ಏನೇನು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಾವು ಈಗಲೇ ತರ್ಕ ಮತ್ತೆ ತೀರ್ಮಾನ ಎಲ್ಲಾ ಮಾಡಿ ಬಿಟ್ಟರೆ ಸ್ವಲ್ಪ ಕಷ್ಟವಾಗುತ್ತದೆ. ಆದ್ದರಿಂದ ತಾವು ಸ್ವಲ್ಪ ತಾಳ್ಮೆಯಿಂದ ದಯಮಾಡಿ ಇರಿ. ವೀರಪ್ಪ ಮೊಯಿಲಿಯವರು ಏನು ಮಾಡುತ್ತಾರೆಂದು ಗೊತ್ತಾಗುತ್ತದೆ. ಆಮೇಲೆ ನೀವೇ ಹೇಳುತ್ತೀರಿ, ಇದು ಸ್ವಲ್ಪ ಜಾಸ್ತಿಯಾಯಿತು ಎಂದು. ಈಗ ನನ್ನ ಮೇಲೆ ಕಂಪ್ಲೇಂಟ್ ಮೊಯಿಲಿಯವರು ಮಾಡುವುದು ಸ್ವಲ್ಪ ಜಾಸ್ತಿಯಾಗುತ್ತದೆ ಎಂದು ಹೇಳಿ ಕಂಪ್ಲೇಂಟ್ ಹೊರತು ಮೊಯಿಲಿಯವರು ಮಾಡುವುದು ಕಡಿಮೆಯಾಯಿತು ಎಂದು ಹೇಳಿ ಕಂಪ್ಲೇಂಟ್ ಇಲ್ಲ. ಏಕೆಂದರೆ ಒಂದು ವ್ಯವಸ್ಥೆ ಇದು ಈ ವ್ಯವಸ್ಥೆಗೆ ಇದಕ್ಕೆ ಯಾರು ಹೊಣೆ? ಒಬ್ಬರ ಮೇಲೆ ಇಬ್ಬರ ಮೇಲೆ ಹೊರುವುದಕ್ಕೆ ಹಾಕುವುದಕ್ಕೆ ಆಗುವುದಿಲ್ಲ. ಇದೊಂದು ವ್ಯವಸ್ಥೆ ಇದೆ. ಈ ವ್ಯವಸ್ಥೆಯನ್ನು ಬುಡಮೇಲು ಮಾಡಿ ಬೇರು ಕಿತ್ತು ಬಿಸಾಕಬೇಕಾದರೆ ಸ್ವಲ್ಪ ಬರೀ ಸಣ್ಣ ಹ್ಯಾಮರಿಂಗ್ ಮಾಡಿದರೆ ಸಾಲದು. ಬಹಳ ಕೆಲವು ಹೊಸ ತಂತ್ರ ಎಲ್ಲಾ ಉಪಯೋಗ ಮಾಡಬೇಕಾಗುತ್ತದೆ. ಬೈರೇಗೌಡರೇ, ತಮಗೆ ಗೊತ್ತಿದೆ. ತಾವೇನು ಹೊಸದೇನೂ ಮಾತನಾಡುವುದು ಇಲ್ಲ. ತಾವು ಮಂತ್ರಿಮಂಡಲದಲ್ಲಿದ್ದಾಗಲೂ ಮಾತನಾಡುತ್ತಲೇ ಬಂದಿದ್ದೀರಿ. ಈ ವ್ಯವಸ್ಥೆ ಏನು ಹಾಳಾಗಿ ಹೋಗಿದೆ, ಈ ಬೇರು ಬಹಳ ಆಳವಾಗಿ ಹೋಗಿದೆ, ಇದನ್ನೆಲ್ಲಾ ಬೇರನ್ನೆಲ್ಲಾ ಕೆದಕಿ ಬಿಸಾಡಬೇಕಾಗುತ್ತದೆ, ಕಿತ್ತು ಬಿಸಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ತಾಯಿ ಬೇರು. ಅದನ್ನು ಕಿತ್ತು ಹಾಕಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ತಾಯಿ ಬೇರು, ಮಗನ ಬೇರು, ಮಗಳ ಬೇರು ಎಲ್ಲಾ ಇದೆ ಅದರಲ್ಲಿ. ಬರೀ ತಾಯಿ ಬೇರು ಅಲ್ಲ. ಆದ್ದರಿಂದ ನಮ್ಮ ಮೇಲೆ ವಿಶ್ವಾಸವನ್ನು ಇಡಿ. ಅದನ್ನು ನಾನು ಕಿತ್ತು ಬಿಸಾಡುತ್ತೇನೆ. ಯಾವುದೇ ಆಕ್ರಮವಾಗಿರತಕ್ಕಂಥ ವ್ಯವಹಾರಗಳು ಕರ್ನಾಟಕ ರಾಜ್ಯದಲ್ಲಿ ನಡೆಯದ ಹಾಗೆ ನಾನು ಮಾಡುತ್ತೇನೆ. ಇದು ಯುದ್ಧ ಎಂದು ಹೇಳಿದರೂ ಅಭಿಮನ್ಯು ತರಹ ನಾವು ಆಗಬಾರದು. ಅರ್ಧ ಅರ್ಧ ನಿಮ್ಮ ಮಾತು ಕೇಳಿ ನಾನು ಒಳಗೆ ಪ್ರವೇಶ ಮಾಡಿ ಅಲ್ಲಿ ಸಿಕ್ಕಿ ಹಾಕಿಕೊಂಡು ಒದ್ದಾಡಿದರೆ ನಿಮಗೂ ಪ್ರಯೋಜನ ಇಲ್ಲ; ನಮಗೂ ಪ್ರಯೋಜನ ಇಲ್ಲ. ನಾನು ಅಭಿಮನ್ಯು ಆಗುವುದಿಲ್ಲ. ಹೆದರಬೇಡಿ.

ಶ್ರೀ ವಾಟಾಳ್ ನಾಗರಾಜ್:- ವಿರಾಟಪರ್ವದಲ್ಲಿ ಅಭಿಮನ್ಯುವೇ ಆಗುತ್ತೀರಿ. ಇನ್ನೇನು

ಮಾಡುತ್ತೀರಿ. ಇದು ವಿರಾಟಪರ್ವವೇ. ಇದರಲ್ಲಿ ನೀವು ಸಿಕ್ಕುತ್ತೀರಿ. ಆದ್ದರಿಂದ ಒಳಗಡೆಗೆ ಹೋಗಬೇಕಾದರೆ ಬಹಳ ಎಚ್ಚರಿಕೆಯಿಂದ ಇರಿ. ನೋಡಿ ವಾಟಾಳ್ ನಾಗರಾಜ್‌ರವರಿಗೆ ಇದು ಗೊತ್ತಿದೆ. ಬೈರೇಗೌಡರು ಸ್ವಲ್ಪ ಬಹಳ ಸುಲಭವಾಗಿ ಅವಸರದಿಂದ ತೀರ್ಮಾನ ಮಾಡಿ ನೀವು ಸಿಕ್ಕಿ ಹಾಕಿಕೊಳ್ಳುತ್ತೀರಿ, ನಾವು ಸಿಕ್ಕಿಹಾಕಿಕೊಳ್ಳುತ್ತೇವೆ. ಇದನ್ನು ನಾವು ಮಾಡುವುದಕ್ಕೆ ಹೋಗುವುದು ಬೇಡ. ಅಭಿಮನ್ಯು ಆಗುವುದು ಬೇಡ ನಾನು. ನಾನೂ ಕೂಡ ವ್ಯೂಹ ರಚನೆ ಮಾಡುತ್ತಿದ್ದೇನೆ. ನಾನು ಅದೇ ಹೇಳಿದೆ, ವ್ಯೂಹ ರಚನೆ ಮಾಡಿ ಯುದ್ಧ ಸಾರಬೇಕು ಎಂದು ಹೇಳಿ. ಆ ಸದನದಲ್ಲಿ ನಾನು ಹೇಳಿದ್ದೇನೆ, ಈ ಸದನದಲ್ಲಿಯೂ ಕೂಡ ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಯಾವುದೇ ರೀತಿಯಾದಂಥ ಅಕ್ರಮ ವ್ಯವಹಾರಗಳಿಗೆ, ಅದು ಅಬ್ಕಾರಿ ಇರಬಹುದು, ಯಾವುದೇ ಇರಬಹುದು, ನಾವು ಅವಕಾಶ ಕೊಡುವುದಿಲ್ಲ. ಅದರ ಮೂಲೋತ್ಪಾಟನೆ ಮಾಡುತ್ತೇವೆ. ಅದರಿಂದ ನಮಗಂತೂ ಏನೂ ಭಯ ಇಲ್ಲ. ಏನೂ ಭಯ ಇಲ್ಲ ಅದರ ಬಗ್ಗೆ. ಮತ್ತೆ ಯಾರ ಹಿಡಿತ ಮತ್ತು ಯಾರ ಪ್ರಭಾವ ಇದರ ಬಗ್ಗೆ ಒಳಗಾಗತಕ್ಕಂಥ ಪ್ರಶ್ನೆ ಇಲ್ಲ.

12.40 ಪಿಎಂ

ರಾಜ್ಯದ ಹಿತಾಸಕ್ತಿ ಮುಖ್ಯ ನಮಗೆ. ತಮ್ಮ ಮಾಹಿತಿಯನ್ನು ನಾನು ಸಂಗ್ರಹ ಮಾಡುತ್ತೇವೆ. ಬಜೆಟ್ ಪ್ರೆಸೆಂಟೇಷನ್ ಮಾಡುವುದಕ್ಕಿಂತ ಮೊದಲು ನಾನು ನಿಮ್ಮ ಜೊತೆ ಮಾತನಾಡುತ್ತೇನೆ. ನಾನು ಏನು ಹೇಳಿದೆನೆಂದು ತಮಗೆ ಗೊತ್ತಿದೆ. ಸಾರಾಯಿ ವಿಷಯ, ನನಗೆ ಗೊತ್ತಿದೆ. ಏಕೆಂದು ಹೇಳಿದರೆ ಈಗ ಮೇಲಿನಿಂದ ಕೆಳಗಡೆ ಒಮ್ಮೆಲೇ ಅಧಿಕಾರಿಗಳನ್ನು ನಾನು ಬದಲಾವಣೆ ಮಾಡಿದರೆ ಮೊಯಿಲಿಯವರು ಏನೋ ಹುಚ್ಚು ಅಧಿಕಾರ ಮಾಡುತ್ತಾರೆಂದು ಹೇಳಬಹುದು. ತಮಗೆ ಗೊತ್ತಿದೆ ಒಂದು ವ್ಯವಸ್ಥೆ ಇದೆ. May be I must have changed the Excise Commissioner. ಅಬಕಾರಿ ಕಮೀಷನರ್‌ನ್ನು ನಾವು ಛೇಂಜ್ ಮಾಡಬಹುದು. ನಾನು ಒಮ್ಮೆಲೇ ಛೇಂಜ್ ಮಾಡಲಿಕ್ಕೆ ಹೋಗಿಲ್ಲ.

Sri C. Byregowda :- It is a welcome measure.

ಶ್ರೀ ಎಂ. ವೀರಪ್ಪ ಮೊಯಿಲಿ:- ಛೇಂಜ್ ಮಾಡಿದ ಮೇಲೆ ಅದನ್ನು ಬದಲಾವಣೆ ಮಾಡಬಾರದು. ಆದ್ದರಿಂದ ಮೇಲಿನಿಂದ ಕೆಳಗಿನವರೆಗೆ ಈ ವ್ಯವಸ್ಥೆಯನ್ನು ನಿರ್ಮಲೀಕರಣ ಮಾಡಬೇಕಾಗಿದೆ. I know what to do. It takes time. I am not just blaming anybody. ಏಕೆಂದರೆ ಹಿಂದಿನ ರಿಜಿಮ್, ಹಿಂದಿನ ಮುಖ್ಯಮಂತ್ರಿಗಳು, ಮತ್ತೊಂದು ಇನ್ನೊಂದು ಇದೆ. ಹಾಗೆ ಹೇಳುವುದಿಲ್ಲ. ಇದು ಒಂದು ತರಹ ಕೆಟ್ಟ ಪರಂಪರೆ ನಮ್ಮ ಕರ್ನಾಟಕದಲ್ಲಿ ಇದೆ. ಈ ಕೆಟ್ಟ ಪರಂಪರೆ ಅನೇಕ ಸರ್ಕಾರಗಳನ್ನು ಮುಳುಗಿಸಿದೆ. ಅದು ನನಗೆ ಗೊತ್ತಿದೆ. ಆ ಪ್ರಜ್ಞೆಯನ್ನು ಇಟ್ಟುಕೊಂಡೇ ನಾನು ಗಟ್ಟಿ ಹೆಜ್ಜೆಯನ್ನು ಇಡಬೇಕು. ಸ್ಲಿಪರಿ ಹೆಜ್ಜೆಯನ್ನು ಇಟ್ಟರೆ ಸಾಲದು. ಇಟ್ಟಂತಹ ಹೆಜ್ಜೆಯನ್ನು ಹಿಂದೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಾನು ಹೇಳುವುದು ಇಷ್ಟೇ. ನಾನು ವಿವರವಾಗಿ ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ. 10-15 ದಿವಸದ ಮೇಲೆ ಕರ್ನಾಟಕದಲ್ಲಿ ಈ ಸಾರಾಯಿ ಬಗ್ಗೆ ಅಥವಾ ಅದರ ಅಕ್ರಮಗಳ ಬಗ್ಗೆ ಅದನ್ನು ಮೂಲೋತ್ಪಾಟನೆ ಮಾಡುವುದಕ್ಕೆ ನಾನು ವ್ಯೂಹ ರಚನೆ ಮಾಡುತ್ತೇನೆ. ತಂತ್ರ ರಚನೆ ಮಾಡುತ್ತೇನೆ. ಅದಕ್ಕಿಂತ ಮೊದಲು ತಮ್ಮ ಸಹಾಯ ಕೂಡ ನಾನು ಕೇಳುತ್ತೇನೆ. I require only 10-15 day's time. ಅಷ್ಟೇನೇ ಬೇರೆ ಏನೂ ಇಲ್ಲ.

ಶ್ರೀ ಸಿ. ಬೈರೇಗೌಡ:- ಅಷ್ಟರೊಳಗಾಗಿ ಏನು ಆಗುತ್ತದೆ? ಸಾರಾಯಿಯಿಂದ ಕನಿಷ್ಟ ಪಕ್ಷ ಒಂದು ದಿವಸಕ್ಕೆ 2 ಕೋಟಿ ರೂಪಾಯಿ ಹೋಗುತ್ತಿದೆ. 15 ದಿವಸ ಸಮಯದಲ್ಲಿ 30-40 ಕೋಟಿ ರೂಪಾಯಿ ಹೋಗುತ್ತದೆ.

ಶ್ರೀ ಎಂ ವೀರಪ್ಪ ಮೊಯಿಲಿ:– ತಾವು ಸ್ವಲ್ಪ ಯೀಲ್ಡ್ ಆಗುವುದಾದರೆ ಹೇಳುತ್ತೇನೆ. ನಾವು ಸುಮ್ಮನೇ ಇಲ್ಲ. ತಾವು ಇನ್‌ಫೆರೆನ್ಸ್ ತೆಗೆದುಕೊಳ್ಳಬೇಡಿ. That doesn't mean we are keeping quiet. ಆ ಕೆಲಸ ನಾವು ಪ್ರಾರಂಭ ಮಾಡಿದ್ದೇವೆ. ಈ ನಿಮಿಷದಿಂದ ಕೂಡ ಅದನ್ನು ಬಲವಾಗಿ ಪರಿಣಾಮಕಾರಿಯಾಗಿ ಮಾಡುತ್ತೇವೆ. 15 days is the maximum limit. ನಾನು ಇನ್ನು 15 ದಿವಸದ ಮೇಲೆ ಕ್ರಮ ಮಾಡುತ್ತೇನೆ ಎಂದು ಅರ್ಥ ಅಲ್ಲ. ಅದನ್ನು ಯಶಸ್ವಿಯಾಗಿ, ಪರಿಣಾಮಕಾರಿಯಾಗಿ ಹತ್ತಿಕ್ಕತಕ್ಕ ಕೆಲಸ from this minute I will do it with more vigour, which will convince you even tomorrow.

ಶ್ರೀ ವೈ.ಕೆ. ರಾಮಯ್ಯ:– ಸನ್ಮಾನ್ಯ ಅಧ್ಯಕ್ಷರೆ, ಸಾರಾಯಿ ಮಾರುವುದರಲ್ಲಿ ಆದಾಯದ ಸೋರಿಕೆ ಇದೆ. ಅದನ್ನು ತಡೆಗಟ್ಟಲಿಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಗಮನ ಸೆಳೆಯುವ ಉದ್ದೇಶದಿಂದ ಇದನ್ನು ಸದನದಲ್ಲಿ ತಂದಿದ್ದೇವೆ. ಆದಾಯದ ಸೋರಿಕೆ ಸರ್ಕಾರಕ್ಕೆ ಆದರೆ ಇದರ ದುಷ್ಪರಿಣಾಮ ಜನರ ಮೇಲೂ ಆಗುತ್ತದೆ. ಇದು ಬಹಳ ಪ್ರಮುಖವಾದುದು. ನಮಗೆ ಗೊತ್ತಿದೆ. ಬಹುಶಃ ಈ ಒಂದು ಬಾಬನ್ನು ಬಿಟ್ಟರೆ ಇವತ್ತಿನ ಪರಿಸ್ಥಿತಿಯಲ್ಲಿ ರಾಜ್ಯದ, ರಾಷ್ಟ್ರವನ್ನು ಆಳಲಿಕ್ಕೆ ಸಾಧ್ಯವೇ ಇಲ್ಲವೇನೋ ಎನ್ನುವಷ್ಟರ ಮಟ್ಟಿಗೆ ನಾವು ಈ ಅಬಕಾರಿ ಉದ್ಯಮದ ಮೇಲೆ, ಸರ್ಕಾರದ ಬೊಕ್ಕಸವನ್ನು ತುಂಬಿಸಿಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ನಿನ್ನೆ ಸ್ನೇಹಿತರುಗಳು ಆದಾಯದ ಸೋರಿಕೆ ಅಷ್ಟನ್ನೇ ಹೇಳಿದ್ದನ್ನು ಕೇಳಿದೆ. ನಾನು ಅದಕ್ಕಿಂತ ಹೆಚ್ಚು ವಿಷಯವನ್ನು ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಆದಾಯದ ಸೋರಿಕೆಯಿಂದ ಸರ್ಕಾರಕ್ಕೆ ಎಷ್ಟು ನಷ್ಟ ಆಗುತ್ತಿದೆಯೋ, ಇದರ ಜೊತೆಗೆ ಜನಗಳ ಸಾಮಾಜಿಕ ಬದುಕಿನ ಮೇಲೂ, ಅವರ ಆರೋಗ್ಯದ ಮೇಲೂ, ಅವರ ಕುಟುಂಬದ ಮೇಲೂ ಅದಕ್ಕಿಂತ ಕೆಟ್ಟ ಪರಿಣಾಮ, ದುಷ್ಪರಿಣಾಮ, ಈ ಅಕ್ರಮ ಸಾರಾಯಿ ಮಾರಾಟದಿಂದ ತರುತ್ತದೆ ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇದಕ್ಕೆ ಮೂಲ ಇಷ್ಟೇ. ಅಕ್ರಮ ಸಾರಾಯಿ ತಯಾರು ಮಾಡಲಿಕ್ಕೆ ಈ ಅಬಕಾರಿ ಗುತ್ತಿಗೆದಾರರು ಸರ್ಕಾರ ಕೊಡುವಂತಹ ಸಾರಾಯಿ ಜೊತೆಗೆ ತಮ್ಮದೇ ಆದಂತಹ ಸಾರಾಯಿ ತಯಾರು ಮಾಡುತ್ತಾರೆ. ನನಗೆ ಆಳವಾದಂಥ ಒಂದು ಪರಿಶ್ರಮ ಈ ಕ್ಷೇತ್ರದಲ್ಲಿ ಇಲ್ಲದೇ ಇದ್ದರೂ ಕೂಡ ನಾನು ಈ ವಿಷಯವನ್ನು ಇಲ್ಲಿಗೆ ಬಂದ ಮೇಲೆ ತಿಳಿದುಕೊಂಡೆ. ಅಕ್ರಮವಾದ ರೆಕ್ಟಿಫೈಡ್ ಸ್ಪಿರಿಟ್ ಅನ್ನು ಉಪಯೋಗಿಸಿ ತಯಾರು ಮಾಡಿದಂತಹ ಸಾರಾಯಿಯನ್ನು ಏಳು ರೂಪಾಯಿಗೆ ಮಾರಬಹುದಂತೆ. ಸರ್ಕಾರದವರು ಮಾಡಿದಂತಹ ಸಾರಾಯಿಯನ್ನು 22 ರೂಪಾಯಿಗೆ ಮಾರಬೇಕಾಗುತ್ತದೆ. ಇದರಿಂದ ಅರ್ಧದಷ್ಟು ಅಕ್ರಮವಾಗಿ ತಯಾರು ಮಾಡಿದಂತಹ ರೆಕ್ಟಿಫೈಡ್ ಸ್ಪಿರಿಟ್, ತಯಾರು ಮಾಡಿದಂತಹ ಸಾರಾಯಿ ವ್ಯಾಪಾರ ಈ ರಾಜ್ಯದಲ್ಲಿ ನಡೆಯುತ್ತಾ ಇದೆ. ಎಲ್ಲದಕ್ಕಿಂತಲೂ ಮೂಲ ಈ ರೆಕ್ಟಿಫೈಡ್ ಸ್ಪಿರಿಟ್. ಮೂಲ ಬೇರು, ತಾಯಿ ಬೇರು, ತಂದೆ ಬೇರು, ಅಕ್ಕನ ಬೇರು, ಅಣ್ಣನ ಬೇರು ಇರುತ್ತದೆ ಈ ರೆಕ್ಟಿಫೈಡ್ ಸ್ಪಿರಿಟ್‌ನಲ್ಲಿ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಅವರ ಹುಟ್ಟು ಹಬ್ಬದ ಕೊಡುಗೆಯಾಗಿ ಈ ರಾಜ್ಯದ ಜನತೆಗೆ ಒಂದು ಇನ್‌ಫರ್ಮೇಷನ್ ಕೊಡಲಿಕ್ಕೆ ಕೇಳಿಕೊಳ್ಳುತ್ತೇನೆ. ಈ ರಾಜ್ಯದಲ್ಲಿ ನೀವು ಯಾರ್ಯಾರಿಗೆ ಎಷ್ಟೆಷ್ಟು ರೆಕ್ಟಿಫೈಡ್ ಸ್ಪಿರಿಟ್ ಕೊಡುತ್ತಿದ್ದೀರಿ ಅನ್ನುವುದನ್ನು ಈ ಸದನದ ಗಮನಕ್ಕೆ ತಂದರೆ ನಾನು ನಿಮಗೆ ಋಣಿಯಾಗಿರುತ್ತೇನೆ. ನನಗೆ ತಿಳಿದಿರುವ ಮಾಹಿತಿಯ ಪ್ರಕಾರ ಔಷಧಿಯನ್ನು ತಯಾರು ಮಾಡುವಂತಹ ನೆಪದಲ್ಲಿ ಅನೇಕ ಜನಗಳು ಈ ರೆಕ್ಟಿಫೈಡ್ ಸ್ಪಿರಿಟ್ ಅನ್ನು ಸರ್ಕಾರದ ಗೊಡೌನ್‌ನಿಂದ ತೆಗೆದುಕೊಂಡು ಈ ಸಾರಾಯಿಯನ್ನು ತಯಾರು ಮಾಡಲಿಕ್ಕೆ ಉಪಯೋಗಿಸುತ್ತಿದ್ದಾರೆ. ಈ ರೆಕ್ಟಿಫೆಡ್ ಸ್ಪಿರಿಟ್‌ಅನ್ನು ಔಷಧಿಯನ್ನು ತಯಾರು ಮಾಡುವಂತಹ ನೆಪದಲ್ಲಿ ತೆಗೆದುಕೊಂಡಂತರವರಿಗೆ ಔಷಧಿಯನ್ನು ತಯಾರುಮಾಡುವಂತಹ ಯಾವ ಯೂನಿಟ್ ಅವರವು ಇಲ್ಲ. ಈ ರೆಕ್ಟಿಫೈಡ್ ಸ್ಪಿರಿಟ್ ಅನ್ನು ಈ ರಾಜ್ಯದಲ್ಲಿ ಯಾರ್ಯಾರಿಗೆ ಎಷ್ಟು ಜನಕ್ಕೆ ಕೊಡುತ್ತೀರಿ ಎನ್ನುವ ಪಟ್ಟಿಯನ್ನು ಇವತ್ತು ಈ ಸದನಕ್ಕೆ ಒದಗಿಸಿಕೊಟ್ಟು ನಮಗೆ ಉಪಕಾರ

ಮಾಡಿಕೊಡಬೇಕೆಂದು ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಸರ್ಕಾರದ ಸಾರಾಯಿಯ ಖರ್ಚು ಕಡಿಮೆಯಾಗಲಿಕ್ಕೆ ಹೊರರಾಜ್ಯಗಳಿಂದ ಹೆಂಡ ಬರುತ್ತಿದೆ, ತುಮಕೂರು ಜಿಲ್ಲೆ, ಬಾರ್ಡರ್ ತಾಲ್ಲೂಕ್‌ಗಳಾದ ಮಧುಗಿರಿ, ಪಾವಗಡ, ಮತ್ತು ತುಮಕೂರಿನಲ್ಲಿ ಅವ್ಯಾಹತವಾಗಿ ಹೆಂಡ ಸಿಗುತ್ತದೆ. ಆದ್ದರಿಂದ ಸರ್ಕಾರಿ ಸಾರಾಯಿಯ ವ್ಯಾಪಾರ ಜಾಸ್ತಿ ಮಾಡಿ ಆದಾಯ ಹೆಚ್ಚು ಮಾಡಿಕೊಳ್ಳುವುದಕ್ಕೆ ಹೊರಗಡೆ ಬರುತ್ತಿರುವಂತಹ ಹೆಂಡವನ್ನು ತಪ್ಪಿಸಲಿಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸಾರಾಯಿಯಲ್ಲಿ ಕಲಬೆರಕೆಯನ್ನು ತಪ್ಪಿಸಬೇಕು. ಸಾರಾಯಿಯನ್ನು ಕಲಬೆರಕೆ ಮಾಡಿ ಮಾರುವವರ ಬಗ್ಗೆ ಕೇಸ್ ಹಾಕಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಎಷ್ಟು ಕೇಸ್‌ಗಳಲ್ಲಿ ಈ ರೀತಿ ಕ್ರಮ ತೆಗೆದುಕೊಳ್ಳಲಾಗಿದೆ. ಕ್ರಮ ತೆಗೆದುಕೊಂಡವರಲ್ಲಿ ಎಕ್ಸ್‌ಜ್ ಕಾನೂನನ್ನು, ಅಬಕಾರಿ a question of enforcement of the existing law, existing practice. ನೀವು ಅದನ್ನು ಮಾಡಿದರೆ ಸಾಕು. ಹೊಸದಾಗಿ ಕಾನೂನು ಬೇಕಾಗಿಲ್ಲ. ಹೊಸದಾಗಿ ನಿಯಮ ಬೇಕಾಗಿಲ್ಲ. ಹೊಸದಾಗಿ ತತ್ವ ಬೇಕಾಗಿಲ್ಲ. ಇರುವಂತಹ ತತ್ವವನ್ನು ಅನುಷ್ಠಾನ ಮಾಡಲಿಕ್ಕೆ ಇವತ್ತು ಅನೌನ್ಸ್ ಮಾಡಿದರೂ ಸಾಕು. ನಿಮಗೂ ಅನುಭವ ಆಗಿದೆ ಎಂದು ಕಾಣುತ್ತದೆ. ಈ ಪ್ಯಾಕೆಟ್‌ಗಳಿಗೆ ತಲೆಮೂಟೆ ಅಂತ ಹೇಳುತ್ತಾರೆ. ಯುರಿಯಾ ಮೂಟೆ ಅಂತ ಹೇಳುತ್ತಾರೆ. ಇದನ್ನು ಜೋಬಿನಲ್ಲಿಟ್ಟುಕೊಂಡಿರುತ್ತಾರೆ. ನಿಮಗೆ ಅನುಭವ ಇದೆಯೋ ಏನೋ ಗೊತ್ತಿಲ್ಲ, 10-11 ಗಂಟೆಯಾದ ಮೇಲೆ ನಮಗೆ ಹೋಗುವುದಕ್ಕೆ ಆಗುತ್ತಿಲ್ಲ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಯಾವುದು ಒಂದು ವಸ್ತು ಸುಲಭವಾಗಿ ಸಿಕ್ಕಿದಾಗ ಅದನ್ನು ಉಪಯೋಗಿಸುವುದು ಜಾಸ್ತಿ. ನೀವು ಈ ಪದ್ಧತಿಯನ್ನು ತಪ್ಪಿಸಿ ಬಾಟಲ್‌ನಲ್ಲಿ ಕೊಡುವಂತಹ ಪದ್ಧತಿಯನ್ನು ತಂದರೆ ಕೊನೆಯ ಪಕ್ಷ ಅದರ ಅವೈಲಬಿಲಿಟಿನಾದರೂ ಕಷ್ಟ ವಾಗುತ್ತದೆ. ಈಗಿನ ಜೇಬಿನೊಳಗೆ, ಪ್ಯಾಂಟ್ ಜೇಬಿನೊಳಗೆ, ಶರ್ಟ್ ಜೇಬಿನೊಳಗೆ, ಎಲ್ಲಿ ಅಂದರೆ ಅಲ್ಲಿ ಇಟ್ಟುಕೊಂಡು ಎಲ್ಲಿ ಅಂದರೆ ಪಟ್ ಅಂತ ತೆಗೆದು ಬಾಯಿಯೊಳಗೆ ಬಿಟ್ಟುಕೊಳ್ಳುತ್ತಾರೆ. ಬಾಟಲ್ ಆದರೆ ಕಷ್ಟ ವಾಗುತ್ತದೆ. ಏಕೆಂದರೆ ಜೋಬಿನಲ್ಲಿ ಇಟ್ಟುಕೊಂಡುಹೋದರೆ ಕಷ್ಟ ಗೊತ್ತಾಗುತ್ತದೆ. ಪ್ಯಾಕೆಟ್‌ಗಳನ್ನು ಇಟ್ಟುಕೊಂಡಷ್ಟು ಸುಲಭದಲ್ಲಿ ಬಾಟಲ್‌ಗಳನ್ನು ಇಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ. ಎರಡನೆಯದು ಈ ಪ್ಯಾಕೆಟ್‌ನಲ್ಲಿ ಮಾಡುವುದರಿಂದ there is more scope for adultration. ಇಂಜೆಕ್ಟ್ ಮಾಡಿ ಅದನ್ನು ಹೊರಗಡೆ ತೆಗೆದುಕೊಂಡು ಒಳಗಡೆ ನೀರನ್ನು ಇಂಜೇಕ್ಟ್ ಮಾಡುತ್ತಾರೆ. ಪ್ಯಾಕೆಟ್‌ನಲ್ಲಿ ಮಾರುವುದನ್ನು ನಿಲ್ಲಿಸಿರುವುದರಿಂದ ಅದನ್ನು ಎಲ್ಲಿ ಅಂದರೆ ಅಲ್ಲಿ ಜನಗಳು ಕುಡಿಯುವುದನ್ನು ತಪ್ಪಿಸಲಿಕ್ಕೆ ಸಾಧ್ಯ. ಎರಡನೆಯದು ಈ ಕಲಬೆರಕೆ ಮಾಡುವುದನ್ನು ತಪ್ಪಿಸಲಿಕ್ಕೆ ಸಾಧ್ಯವಾಗುತ್ತದೆ. ಇವತ್ತಿನಿಂದಲೇ ಈ ಪ್ಯಾಕೆಟ್‌ನಲ್ಲಿ ಈ ಯೂರಿಯಾ ಮೂಟೆ ರೀತಿ ಅಥವಾ ತಲೆದಿಂಬು ರೀತಿ ಮಾಡುವುದನ್ನು ತಪ್ಪಿಸಬೇಕೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಬಹಳ ಪ್ರಮುಖವಾದ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತೇನೆ. ಇಷ್ಟೊಂದು ಈ ರಾಷ್ಟ್ರದ ಈ ರಾಜ್ಯದ ಭ್ರಷ್ಟಾಚಾರಕ್ಕೆ ಅತಿ ಹೆಚ್ಚಿನ ಕೊಡುಗೆ ಈ ಕ್ಷೇತ್ರದಿಂದ. ರಾಜ್ಯದ ಬೊಕ್ಕಸಕ್ಕೆ ಅಥವಾ ಈ ರಾಜ್ಯದ ಸಂಪನ್ಮೂಲಗಳ ಕ್ರೋಡೀಕರಣಕ್ಕೆ ಅಬಕಾರಿ ಇಲಾಖೆ ಎಷ್ಟು ಪ್ರಮುಖವೋ ಬಹುಶಃ ರಾಜ್ಯದ ಆಡಳಿತದಲ್ಲಿ ಭ್ರಷ್ಟಾತನಕ್ಕೂ ಅಷ್ಟೇ ಕೊಡುಗೆಯಾಗಿದೆ. ಆದ್ದರಿಂದ ಈ ಇಲಿಸಿಟ್ ನಿಲ್ಲಿಸಲಿಕ್ಕೆ, ಇದನ್ನೆಲ್ಲಾ ತಡೆಯಲಿಕ್ಕೆ ಸರ್ಕಾರ ಈ ಉದ್ದಿಮೆಯನ್ನು ಏತಕ್ಕೆ ರಾಷ್ಟ್ರೀಕರಣ ಮಾಡಬಾರದು? ಇದಕ್ಕೆ ಕಾನೂನಿನ ತೊಡಕು ಇಲ್ಲ. ಈ ವಿಷಯ ಈ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯದ ಮುಂದೆ ಈಗಾಗಲೇ ಬಂದಿದೆ. ಒಂದು ಸರ್ವೋಚ್ಚ ನ್ಯಾಯಾಲಯದ ನ್ಯಾಯ ಮೂರ್ತಿಗಳು ರಾಜ್ಯ ಸರ್ಕಾರ ಇದನ್ನು ಮಾಡುವುದಾದರೆ ಕಾನೂನಿನ ತೊಡಕಿಲ್ಲ ಎಂದು ಹೇಳಿದ್ದಾರೆ. ನಮ್ಮ ಮುಖ್ಯಮಂತ್ರಿಗಳು ಬಹಳ ದಿಟ್ಟತನದಿಂದ ಉತ್ತರವನ್ನು ಕೊಟ್ಟಿದ್ದಾರೆ. ನಿನ್ನೆಯೂ ಕೂಡ ಕೊಟ್ಟಿದ್ದಾರೆ. ಈ ರಾಜ್ಯದ ಅಬಕಾರಿ ದೊರೆಗಳ ಹಂಗಿನಲ್ಲಿ ಈ ಸರ್ಕಾರ

ಕೆಲಸವನ್ನು ಮಾಡುವಂತಹ ಅವಶ್ಯಕತೆ ಇಲ್ಲ ಮಾಡುವುದಿಲ್ಲ. ಇದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಸರ್ಕಾರ ಈ ಉದ್ಯಮವನ್ನು ಏಕೆ ರಾಷ್ಟ್ರೀಕರಣ ಮಾಡಬಾರದು. ಈ ಎಲ್ಲಾ ಅಚಾತುರ್ಯಗಳಿಗೆ ಅವ್ಯವಹಾರಕ್ಕೆ ಮತ್ತು ಈ ಇಲಾಖೆಯ ಭ್ರಷ್ಟತನಕ್ಕೆ ಮೂಲವಾದಂತಹ ಮತ್ತು ಪ್ರಮುಖವಾದಂತಹ ಕಾರಣ ಏನು ಎನ್ನುವುದನ್ನು ನ್ಯಾಯಾಮೂರ್ತಿ ದೇಸಾಯಿಯವರು ಅವರ ವರದಿಯಲ್ಲಿ ಹೇಳಿದ್ದಾರೆ. ಅದರ ಒಂದೇ ಒಂದು ವಾಕ್ಯವನ್ನು ನಾನು ಓದುತ್ತೇನೆ.

"The Government in its eagerness to milk a fatty cow is overplaying its hand and allowed an equal part of the bounty to get away".

That is what Justice Desai Commission says. 500 ಕೋಟಿ ನಿಮ್ಮ ನಿರೀಕ್ಷೆ ಇದ್ದರೆ ಇದರ ಪ್ರಕಾರ ಇನ್ನೂ 500 ಕೋಟಿ ಸೋರಿ ಹೋಗುತ್ತಿದೆ ಎನ್ನುವುದನ್ನು ನಿರ್ದಿಷ್ಟವಾಗಿ ಹೇಳಬಹುದು. Therefore the Commission recommends that the production, distribution of retail sale of liquor inside the State should be nationalised. In other words, the Commission suggests absolute control over the bonded warehouses, breweries, distilleries, retail sale point and their being shifted to the public sector. ಈ ಮಾತನ್ನು ಹೇಳುವಾಗ ಇದು ಒಂದು ಅತ್ಯಂತ ಲಾಭದಾಯಕವಾದಂತಹ ಒಂದು ಉದ್ಯಮವೆಂದು ಈ ಲಾಭದಾಯಕವಾದಂತಹ ಉದ್ಯಮವನ್ನು ಸಾರ್ವಜನಿಕ ಕ್ಷೇತ್ರಕ್ಕೆ ತರಲಿಕ್ಕೆ ಏನೂ ಅಡ್ಡಿ ಇಲ್ಲ. The incidence of NDP liqours and ID liqour is the major menace faced by the Department. ಈ ಪದವನ್ನು ನಾನು ಹೇಳುತ್ತಿಲ್ಲ. ನಮ್ಮ ಮಾನ್ಯ ಬೈರೇಗೌಡರ ಹತ್ತಿರ ಇರುವಂತಹ ಅವರ ಇಲಾಖೆಯಲ್ಲಿ ಕೊಟ್ಟಿರುವುದರಿಂದ ಅವರ ಡಾಕ್ಯುಮೆಂಟ್ ಒಳಗೆ ಬರೆದಿದ್ದಾರೆ. ಕಾನೂನಿನ ತೊಡಕು ಇಲ್ಲ. ರಾಜ್ಯ ಸರ್ಕಾರಕ್ಕೆ ಹೆಂಡದ ದೊರೆಗಳ ಹಂಗಿಲ್ಲ. ಮತ್ತೆ ರಾಷ್ಟ್ರೀಕರಣಕ್ಕೆ ಇರುವ ತೊಂದರೆ ಏನು? ಇದಕ್ಕೆ ನಾನು ನಿರ್ದಿಷ್ಟವಾದಂತಹ ಉತ್ತರವನ್ನು ರಾಜ್ಯ ಸರ್ಕಾರದಿಂದ ಬಯಸುತ್ತೇನೆ. ಈ ವಿಷಯದಲ್ಲಿ ಒಂದು ಮಾತನ್ನು ಹೇಳಿದರೆ ಅಪ್ರಕೃತವಾಗಲಾರದು ಎಂದು ಕಾಣುತ್ತದೆ. ಈ ದಿಸೆಯಲ್ಲಿ ನಾವು ಎಲ್ಲಿಗೆ ತಲುಪಿದ್ದೇವೆ ಅಂದರೆ ಹೆಂಡ ಕುಡಿಸದೇ ಇದ್ದರೆ, ಸಾರಾಯಿಯನ್ನು ಹಂಚದೆ ಇದ್ದರೆ ಚುನಾವಣೆಗಳನ್ನು ನಡೆಸಲಿಕ್ಕೆ ಸಾಧ್ಯವಿಲ್ಲ. ಹೆಂಡದ ದೊರೆಗಳ ಆಶೀರ್ವಾದ ಇಲ್ಲದೇ ಇದ್ದರೆ ರಾಜ್ಯವನ್ನು ಆಳಲಿಕ್ಕೆ ಸಾಧ್ಯವಿಲ್ಲ ಎನ್ನುವಂತಹ ಹಂತಕ್ಕೆ ನಾವು ಮುಟ್ಟಿದ್ದೇವೆಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ. ಚುನಾವಣೆಗಳನ್ನು ಇತ್ತೀಚೆಗೆ ನೋಡಿದಂತಹ ನನಗಂತೂ ಜನಗಳು ಮಾತನಾಡುವುದರಲ್ಲಿ ಉತ್ಪ್ರೇಕ್ಷೆ ಇಲ್ಲವೆಂದು ಅನಿಸುತ್ತದೆ. ಕೇವಲ ಬೊಕ್ಕಸಕ್ಕೆ ಆದಾಯವನ್ನು ಸೇರಿಸುವುದರ ಜೊತೆಗೆ ನಮ್ಮ ಸಾಮಾಜಿಕ ಬದುಕಿನ ಮೇಲೆ ಯಾವ ರೀತಿಯ ದುಷ್ಪರಿಣಾಮವನ್ನು ಬೀರುತ್ತದೆ, ಮತ್ತು ನಮ್ಮ ಜನತಂತ್ರ ವ್ಯವಸ್ಥೆಯ ಮೇಲೂ ಕೂಡ ಈ ಇಲಾಖೆ ಅತ್ಯಂತ ದುಷ್ಪರಿಣಾಮ ಬೀರಿದೆ ಎನ್ನುವುದನ್ನು ನಾವು ಯೋಚಿಸಬೇಕಾಗುತ್ತದೆ. Now a days it has become a status symbol also. ನನ್ನ ಇತರ ಸ್ನೇಹಿತರ ಅನುಭವ ನನಗೇನೂ ಗೊತ್ತಿಲ್ಲ. ಇಲಿಸಿಟ್ ಲಿಕ್ಕರು ನ್ಯಾಯವಾಗಿ ಮಾಡಿದ ಲಿಕ್ಕರು ಯಾವುದರಿಂದ ಇಳಿಸಿದ್ದೋ ಎನ್ನುವುದೇ ಗೊತ್ತಾಗುವುದಿಲ್ಲ. ಈ ಸ್ಥಿತಿಗೆ ನಾವು ತಲುಪಿದ್ದೇವೆ. ಹೆಂಡ ಸಾರಾಯಿಯ ವಿತರಣೆಯನ್ನು ಮಾಡದೇ ಚುನಾವಣೆಯನ್ನು ನಡೆಸಲಿಕ್ಕೆ ಆಗುವುದಿಲ್ಲ ಎಂದು ಜನಜನಿಕವಾದ ಸಾರ್ವಜನಿಕ ಅಭಿಪ್ರಾಯ ಇದೆ. ಹೆಂಡದ ದೊರೆಗಳ ಆಶೀರ್ವಾದ ಇಲ್ಲದೇ ರಾಜ್ಯವನ್ನು ನಡೆಸುವುದಕ್ಕೆ ಆಗುವುದಿಲ್ಲ. ಇದು ಎಲ್ಲದಕ್ಕೂ ಇರುವ ಒಂದೇಒಂದು ಮದ್ದು ನ್ಯಾಷನಲೈಜೇಷನ್. ರಾಷ್ಟ್ರೀಕರಣವನ್ನು ಮಾಡುವುದರಿಂದ ಇದೆಲ್ಲವನ್ನು ನಾವು ಅರ್ಥೈಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಅಧ್ಯಕ್ಷರು:– ನೀವು ಇನ್ನು ಎರಡು ನಿಮಿಷದಲ್ಲಿ ಮುಗಿಸಿ.

ಶ್ರೀ ವೈ.ಕೆ. ರಾಮಯ್ಯ:- ಕುಡುಕರ ಬಗ್ಗೆ ನಮ್ಮ ದಾರ್ಶನಿಕರು ಏನಾದರೂ ಹೇಳಿಕೊಂಡಿರಲಿ. Now a days it has become a status symbol also. ತಾವು ಮಂಡ್ಯ ಜಿಲ್ಲೆಯವರಾದ್ದರಿಂದ ದಯಮಾಡಿ ತಾವು ತಪ್ಪು ತಿಳಿದುಕೊಳ್ಳಬೇಡಿ. ಮೊನ್ನೆ ಮಂಡ್ಯ ಜಿಲ್ಲೆಯವರೇ ಆದ ನನ್ನ ಸ್ನೇಹಿತರು ಹೇಳಿದರು. ಏನೆಂದರೆ ಒಂದು ಅಣ್ಣ ತಮ್ಮಂದಿರ ಮನೆ ಅದರ ಮಧ್ಯದಲ್ಲಿ ಒಂದು ಗೋಡೆ ಇದೆ. ಅವರ ತಮ್ಮನ ಮಗ ಹೆಂಡವನ್ನು ಕುಡಿಯುತ್ತಾನೆ. ಅವರು ಕೇಳಿಸಿಕೊಳ್ಳಲಿ ಎಂದು ಅಣ್ಣ ಅವನ ಹೆಂಡತಿಗೆ ಹೇಳುತ್ತಾನಂತೆ. ಏಕೆ ನಿಮ್ಮ ಹುಡುಗ ಹೋಗಿ ಹೆಂಡವನ್ನು ಕುಡಿಯುತ್ತಾನೆ, ಕುಡಿಯುವುದು ಇದ್ದರೆ ಬೀರು, ಬ್ರಾಂದಿಯನ್ನು ತರಿಸಿಕೊಂಡು ಕುಡಿ ಎಂದು ಹೇಳಿ ಅಂತ ಹೇಳಿದನಂತೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತೇನೆ ಅಂದರೆ ಇದರ ವ್ಯಾಪಕವಾದಂತಹ ದುಷ್ಪರಿಣಾಮ ನಮ್ಮ ಸಾಮಾಜಿಕ ಬದುಕಿನ ಮೇಲೆ ಎಷ್ಟರವರೆಗೆ ಡೀಪ್‌ರೂಟ್ ಆಗಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದ್ದರಿಂದ ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಈ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದಕ್ಕೆ ಇಚ್ಛಾಶಕ್ತಿ ಬೇಕಾಗುತ್ತದೆ. ಉಳಿದದ್ದು ಕಾನೂನಿನ ತೊಡಕಾಗಲಿ ಬೇರೆ ಯಾವುದೂ ಇಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಎಲ್ಲಾ ಜಿಲ್ಲೆಯಲ್ಲಿಯು ಹಾಗೆ ಇದೆ ಎನ್ನತಕ್ಕದ್ದನ್ನು ಅವರು ಅಮೆಂಡ್ ಮಾಡಿಕೊಂಡರೆ ಬಹಳ ಒಳ್ಳೆಯದು ಎಂದು ಹೇಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ:- ಯಥೇಚ್ಚವಾಗಿ ಇದೆ ಅದನ್ನು ನಾನು ನೋಡಿದ್ದೇನೆ. ನಮ್ಮ ಹೆಸರು ಹೇಳಲಿಲ್ಲ ಅಂತ ಅವರಿಗೆ ಚಿಂತೆಯಾಗಿತ್ತು. ಅದಕ್ಕೋಸ್ಕರ ಹೇಳುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಎಲ್ಲಾ ಜಿಲ್ಲೆಯಲ್ಲಿಯೂ ಇದೆ. ವಿಶೇಷವಾಗಿ ಕೋಲಾರ, ಹಾಸನ, ಮಂಡ್ಯ ಜಿಲ್ಲೆಯಲ್ಲಿ ಇದೆ.

ಶ್ರೀ ಸಿ. ಬೈರೇಗೌಡ:- ನಮ್ಮ ಜಿಲ್ಲೆಯಲ್ಲಿ ಕಡಿಮೆಯಾಗಿದೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಹಾಸನ ಜಿಲ್ಲೆಯಲ್ಲಿ ಗೌಡರಗದ್ದಲ ಹೆಚ್ಚಾಗಿ ಇದೆ. ಅಲ್ಲಿ ಹೆಚ್ಚಿಗೆ ಇರಬಹುದು.

ಶ್ರೀ ಸಿ. ಬೈರೇಗೌಡ:- ಇಲ್ಲ ಎಂದು ಹೇಳುವುದಿಲ್ಲ. ನಮ್ಮ ಜಿಲ್ಲೆಯಲ್ಲಂತೂ ಕಡಿಮೆಯಾಗಿದೆ.

ಶ್ರೀ ಕೆ.ಹೆಚ್. ರಂಗನಾಥ್:- ಎಲ್ಲದರಲ್ಲೂ ಮುಂದೆ ಇರುವ ಜಿಲ್ಲೆ ಇದರಲ್ಲಿ ಹಿಂದೆ ಬೀಳುವುದಕ್ಕೆ ಆಗುತ್ತದೆಯೇ?

ಶ್ರೀ ವೈ.ಕೆ. ರಾಮಯ್ಯ:- ಮಂಡ್ಯದ ನನ್ನ ಸ್ನೇಹಿತರು ಹೇಳಿದ್ದರಿಂದ ನಾನು ಅವರಿಗೆ ಉದಾಹರಣೆಯನ್ನು ಕೊಟ್ಟೆ. ಹಾಸನದ ಪರಿಸ್ಥಿತಿ ಇನ್ನೂ ಬಹಳ ಗಂಭೀರವಾಗಿದೆ. ಅಲ್ಲಿ ಹೆಂಡ ಇಲ್ಲದೆ ಯಾವ ಚುನಾವಣೆಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಒಂದು ಪ್ಯಾಕೆಟ್‌ನಲ್ಲಿ ಹುರಿಬಾದು, ಮತ್ತು ಬಾಟಲ್ ಎರಡನ್ನು ಒಟ್ಟಿಗೆ ಕೊಡಬೇಕಾಗುತ್ತದೆ. ಬೇರೆ ಬೇರೆ ಕೊಟ್ಟರೂ ಆಗುವುದಿಲ್ಲ.

ಶ್ರೀ ಆರ್. ದಯಾನಂದರಾವ್:- ನಿಮಗೆ ಕೊಟ್ಟು ಪ್ರಾಕ್ಟಿಸ್ ಆಗಿದೆ.

ಶ್ರೀ ವೈ.ಕೆ. ರಾಮಯ್ಯ:- ಮೊನ್ನೆ ನನ್ನ ಸ್ನೇಹಿತರು ಇದನ್ನು ಹೇಳಿದ್ದರಿಂದ ನಾನು ಹೇಳಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಮಾನ್ಯ ದಯಾನಂದರಾವ್ ಒಬ್ಬರೇ ಹರಿಶ್ಚಂದ್ರರು ರಾಮಯ್ಯನವರಿಗೆ ಕೊಟ್ಟು ಪ್ರಾಕ್ಟಿಸ್ ಆಗಿದೆ. ನೀವೊಬ್ಬರೇ ಹರಿಶ್ಚಂದ್ರರಾಗಿ ಎಲೆಕ್ಷನ್‌ನಲ್ಲಿ ಗೆದ್ದು ಬಂದಿದ್ದೀರಿ.

ಶ್ರೀ ಆರ್. ದಯಾನಂದರಾವ್:- ನಾವು ಹೊಸದಾಗಿ ಆರಿಸಿ ಬಂದಿದ್ದೇನೆ. ಅವರು ನಮಗೆ ಸೀನಿಯರ್ ಆಗಿದ್ದಾರೆ. ಅವರಿಂದ ನಾವು ಕೇಳ್ಪಟ್ಟಿವು ಅಷ್ಟೆ.

ಶ್ರೀ ವೈ.ಕೆ. ರಾಮಯ್ಯ:- ಚುನಾವಣೆಯಲ್ಲಿ ಯಾರೂ ನನ್ನ ಪರವಾಗಿ ಹೆಂಡವನ್ನು ಕುಡಿಸಿಲ್ಲ ಅಥವಾ ದುಡ್ಡನ್ನು ಕೊಟ್ಟಿಲ್ಲವೆಂದು ನನ್ನ ಪರವಾಗಿ ನಾನು ಹೇಳುವಷ್ಟು ಸತ್ಯಸಂದನಲ್ಲ. ಆದರೆ ತಮ್ಮ ಮುಖಾಂತರ ನನ್ನ ಸ್ನೇಹಿತರ ಗಮನಕ್ಕೆ ತರಲಿಕ್ಕೆ ಇಷ್ಟ ಪಡುತ್ತಿದ್ದೇನೆ, ನನ್ನ ರಾಜಕೀಯ ಜೀವನದಲ್ಲಿ ನಾನು ನಡೆಸಿರತಕ್ಕಂಥ ಯಾವುದೇ ಚುನಾವಣೆಯಲ್ಲಿ ಒಂದೇ ಒಂದು ಪೈಸದ ಹೆಂಡವನ್ನು ತಂದು ಹಂಚುವಂತಹ ಪಾಪದ ಕೆಲಸವನ್ನು ನಾನು ಮಾಡಿಲ್ಲ. ಅದನ್ನು ತಮ್ಮ ಮುಖಾಂತರ ಅವರ ಗಮನಕ್ಕೆ ತರಲಿಕ್ಕೆ ಇಷ್ಟ ಪಡುತ್ತೇನೆ. ಒಂದೇ ಒಂದು ರೂಪಾಯಿ ಇಲ್ಲ, ಒಂದೇ ಒಂದು ಪೈಸದ್ದು ಇಲ್ಲ. ನಾನು ವಿಷಯದ್ದಲ್ಲೇ ಇದ್ದೇನೆ. ವಿಷಯದಿಂದ ಡೀವಿಯೇಟ್ ಮಾಡಿದ್ದರಿಂದ ನಾನು ಡೀವಿಯೇಟ್ ಆದೆ ಅಷ್ಟೆ. ವಿಷಯ ಬಿಟ್ಟು ನಾನು ಆಚೆಗೆ ಹೋಗಿರಲಿಲ್ಲ. ಎಲ್ಲರೂ ಹೆಂಡವನ್ನು ಕುಡಿಸಬೇಕಾಗುತ್ತದೆ. ನಾನಂತೂ ಆ ಪಾಪದ ಕೆಲಸ ಮಾಡಿಲ್ಲ ಅಂತ ನಾನು ಅವರ ಗಮನಕ್ಕೆ ತಂದು ಸರ್ಕಾರ...

ಶ್ರೀ ಆರ್. ದಯಾನಂದರಾವ್:- ಬೇರೆಯವರು ಮಾಡಿದ್ದಾರೆಂದು ಹೇಳುತ್ತೀರಾ? ನೀವು ಹರಿಶ್ಚಂದ್ರರು, ಬೇರೆಯವರು ಮಾಡಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ:- ತಮ್ಮ ಮುಖಾಂತರ ಸರ್ಕಾರಕ್ಕೆ ನನ್ನ ಮನವಿ ಇಷ್ಟೆ. ಅಕ್ರಮವಾಗಿ ತಯಾರು ಮಾಡಿದಂಥ ಸಾರಾಯಿ ವ್ಯವಹಾರ ನಡೆಯುವುದರಿಂದ ಸರ್ಕಾರದ ಬೊಕ್ಕಸಕ್ಕೆ ಹಣ ಕಡಿಮೆ ಆಗುವುದರ ಜೊತೆಗೆ ಜನರ ಆರೋಗ್ಯದ ಬಗ್ಗೆ ಅವರ ಬದುಕಿನ ಮೇಲೆ ಕೆಟ್ಟ ಪರಿಣಾಮವಾಗುತ್ತದೆ ಇದನ್ನು ನಿಲ್ಲಿಸುವಂಥ ಇಚ್ಛಾಶಕ್ತಿಯನ್ನು ಸರ್ಕಾರ ಪ್ರದರ್ಶನ ಮಾಡಬೇಕೆಂದು ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ :- ಮಾನ್ಯ ಅಧ್ಯಕ್ಷರೆ, ಅರಾಕ್‌ನಿಂದ ಏನು ರೆವಿನ್ಯೂ ಬರಬೇಕಾಗಿದೆ ಅದರ ವಿಚಾರದಲ್ಲಿ ಸಾಕಷ್ಟು ಬೆಳಕನ್ನು ಮಾನ್ಯ ಬೈರೇಗೌಡರು, ಮಾನ್ಯ ರಾಮಯ್ಯನವರು ಚೆಲ್ಲಿದ್ದಾರೆ. ನಾನು ನೇರವಾಗಿ ಮುಖ್ಯಮಂತ್ರಿಗಳಿಗೆ ಎರಡು ಪ್ರಶ್ನೆಗಳನ್ನು ಕೇಳುತ್ತೇನೆ. ಮೊದಲನೆಯದಾಗಿ ಮುಖ್ಯವಾಗಿ ಅರಾಕ್ ರೆವಿನ್ಯೂ ಕಡಿಮೆಯಾಗಲಿಕ್ಕೆ ಇದೊಂದು ಮನಾಪಲಿ ಬಿಸಿನೆಸ್ ಆಗಿದೆ. ಹಾಗಾಗಿ ಈ ಮನಾಪಲಿಯನ್ನು ತಾವು ಮುರಿದರೆ ಸಾಕಷ್ಟು ರೆವಿನ್ಯೂ ಬರಲಿಕ್ಕೆ ಸಾಧ್ಯವಿದೆ. ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ಕೇಳುತ್ತೇನೆ. ಎರಡನೆಯದು ಅನ್‌ಲೈಸೆನ್ಸ್‌ಡ್ ಅಂಗಡಿಗಳು ಬಹಳ ಇವೆ. ಅವು ಇವತ್ತು ಇವೆ ಎಂದು ಹೇಳುವುದಿಲ್ಲ. ಎಷ್ಟೋ ವರ್ಷಗಳಿಂದ ಆಗಿ ಬಂದಿವೆ. ಹಾಗಾಗಿ ಸರ್ಕಾರದ ರೆವಿನ್ಯೂ ಮೇಲೆ ಪರಿಣಾಮವಾಗಿದೆ. ಅರಾಕ್ ಮತ್ತು ಬಾಟ್ಲಿಂಗ್‌ಗೆ ನೇರವಾದ ಸಂಬಂಧವಿದೆ. ಬಾಟ್ಲಿಂಗ್ ಕಂಟ್ರಾಕ್ಟ್ ನಾವು ನಿಮ್ಮ ಸರ್ಕಾರ ಇದ್ದಾಗ ಕೊಟ್ಟಾಗ ಸಾಕಷ್ಟು ಆಪಾದನೆ ಆಯಿತು. ತಮ್ಮ ಸರ್ಕಾರದವರು ಏನು ಬಾಟ್ಲಿಂಗ್ ಕಂಟ್ರಾಕ್ಟ್ ಕೊಟ್ಟಿದ್ದಾರೆ, ಮೆಜಾರಿಟಿ ಕಂಟ್ರಾಕ್ಟ್ಸ್ are benami - - - ಯಾವ ಹೆಸರಿನಲ್ಲಿರುವುದನ್ನು ಯಾರೋ ಕಂಟ್ರಾಕ್ಟ್ಸ್ ಮಾಡುತ್ತಿದ್ದಾರೆ. ಹಾಗಾಗಿ ಎಲ್ಲಾ ಕಂಟ್ರಾಕ್ಟ್ಸ್ ತಾವು ರದ್ದು ಮಾಡುವ ದೃಷ್ಟಿಯಿಂದ ಏನು ಕ್ರಮ ತೆಗೆದುಕೊಳ್ಳುತ್ತಿದ್ದೀರೆಂದು ಕೇಳುತ್ತಿದ್ದೇನೆ. ಕೊನೆಯದಾಗಿ ತಾವು ಎಕ್ಸ್‌ಜ್ ಕಮೀಷನರ್ ಬದಲಾವಣೆ ಮಾಡಿದ್ದೀರಿ ಅದಕ್ಕಾಗಿ ಬಹಳ ಸಂತೋಷ. ತಾವು ಸೆಕೆಂಡ್ಸ್‌ನ್ನು ಸ್ವಾಪ್ ಮಾಡಿದ್ದೀರಿ. ಈ ರೀತಿ ಸ್ಯಾಕೆಟ್ಸ್ ಅನ್ನು ಲಿಬಲರೈಸಲ್ ಅಲ್ಲ, ಅದನ್ನು ನೀವು ಸ್ವಾಪ್ ಮಾಡುವುದಕ್ಕೆ ನಿಮಗೆ 10-15 ದಿವಸ ಏತಕ್ಕೆ ಬೇಕು. ತಕ್ಷಣ ಅದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಏತಕ್ಕೆ ಬರುವುದಿಲ್ಲ. ತಾವು ಆಡಿಷನಲ್ ಕಮೀಷನ್ ಮಾಡುವುದಕ್ಕೆ ಹೊರಟ್ಟಿದ್ದೀರೆಂದು ನಾನು ಕೇಳಿದ್ದೇನೆ. ಅದರ ಅವಶ್ಯಕತೆ ಏನಿದೆ. Where is a will there is a way - - - ಅರಾಕ್‌ನಲ್ಲಿ, ಸಾರಾಯಿ ವ್ಯವಹಾರದಲ್ಲಿ ಸಾಕಷ್ಟು

ಸಮಯ ಅರಾಕ್ ಕಂಟ್ರಾಕ್ಟ್ರ್ಸ್‌ಗೆ ಏತಕ್ಕೆ ಕೊಡುತ್ತೀರೆಂದು ನೇರವಾಗಿ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ:– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಒಂದು ಕಡೆಯ ಚಿತ್ರವನ್ನು ಕೊಟ್ಟಿದ್ದಾರೆ. ಒಟ್ಟು ಅಬಕಾರಿ ಆದಾಯ ಏನು ಇದೆ ಆ ಆದಾಯದಲ್ಲಿ ಶೇಕಡ 70ರಷ್ಟು ಈ ಒಂದು ಸಾರಾಯಿ ವಿಭಾಗದಿಂದ ಬರುತ್ತಿದೆ. ಈಗಾಗಲೇ ಐ.ಎಂ.ಎಫ್.ಎಲ್ ಬಗ್ಗೆ ಮಾತನಾಡುತ್ತಾ ಅದನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆಂದು ಹೇಳಿದರು. ಸೆಕೆಂಡ್ಸ್ ಇಲ್ಲಿಂದ ತಯಾರಾಗಿ ಹೋಗುವುದು ನಿಂತಿರಬಹುದು ಆದರೆ ಹೊರ ರಾಜ್ಯಗಳಿಂದ ಕರ್ನಾಟಕ ಪ್ರದೇಶಕ್ಕೆ ಏನು ಸೆಕೆಂಡ್ಸ್ ಬರುತ್ತಿದೆ ಅದನ್ನು ನಿಲ್ಲಿಸಲಿಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೆಲವು ಸ್ನೇಹಿತರು ಕೇಳಿದರು. ಮುಖ್ಯವಾಗಿ ಗೋವಾ, ಮಹಾರಾಷ್ಟ್ರದಿಂದ ಬರುತ್ತಿದೆ ಎನ್ನುವುದು ನಮಗೆ ವರದಿ ಬಂದಿದೆ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ. ತದ ನಂತರ ಅಕ್ರಮವಾಗಿ ತಯಾರು ಮಾಡುವಂತಹ ಸಾರಾಯಿ ಕೇಂದ್ರಗಳು ಬಹಳ ಇದೆ ಅದಕ್ಕೆ ಬಲವಾದ ರಾಜಕೀಯ, ಆಡಳಿತದ ರಕ್ಷಣೆ ಇದೆ ಅದನ್ನು ಬೇರೆ ಮಾಡದೆ ನಾವು ಎಷ್ಟೇ ಇಲ್ಲಿ ಘೋಷಣೆ ಮಾಡಿದರೂ ಅಷ್ಟೇ, ಎಷ್ಟು ಮಾತನಾಡಿದರೂ ಸಾಧ್ಯವಿಲ್ಲ. ಅಂತಹ ಧೃಡ ನಿರ್ಧಾರ ತೆಗೆದುಕೊಳ್ಳುವಂತಹ ಹಿತಾಸಕ್ತಿ ಈ ಸರಕಾರಕ್ಕೆ ಇದೆಯೇ ಇಲ್ಲವೇ ಎಂಬುದನ್ನು ನಾವು ವಿಚಾರ ಮಾಡಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಸಮಯ ಕೊಡಿ ಎಂದು ಕೂಡ ಹೇಳಿದ್ದಾರೆ. ನಾನು ಈಗಲೇ ತೀರ್ಮಾನ ಮಾಡಿ ಎಂದು ಕೇಳುತ್ತಿಲ್ಲ ತಮಗೆ ಸಮಯವನ್ನು ಕೊಡುತ್ತೇವೆ. 15 ದಿವಸ ಬೇಡ 2 ತಿಂಗಳು ತೆಗೆದುಕೊಳ್ಳಿ ವರ್ಷಗಟ್ಟಲೆಯಿಂದ ಬಂದಂತಹ ರೋಗವನ್ನು ನಾಳೆಗೇ ವಾಸಿ ಮಾಡುತ್ತೇವೆ ಎಂಬ ನಂಬಿಕೆ ನಮಗೆ ಇಲ್ಲ. ಅಷ್ಟೊಂದು ಬಲಶಾಲಿಯಾಗಿ ತಾವು ಇದ್ದೀರೋ ಇಲ್ಲವೋ ಅದು ನಮಗೆ ಗೊತ್ತಿಲ್ಲ. ಏಕೆಂದರೆ ಈ ದೇಶದ ಪಟ್ಟಭದ್ರ ಹಿತಾಸಕ್ತಿಗಳು ನಿಮ್ಮನ್ನು ಹಾಗೆ ಮಾಡುವುದಕ್ಕೆ ಬಿಡದೇ ಇರಬಹುದು, ಸಾಮಾನ್ಯ ಜನ ಏನಿದ್ದಾರೆ ಅವರು ಇಂತಹ ಯಾವುದೇ ಕ್ರಮ ತೆಗೆದುಕೊಂಡರೂ ಸರಕಾರಕ್ಕೆ ಬೆಂಬಲ ಕೊಡುತ್ತಾರೆ. ಅವರ ಬೆಂಬಲ ಯಾವಾಗಲೂ ಇದಕ್ಕೆ ಇರುತ್ತದೆಂಬುದನ್ನು ಮರೆಯಬಾರದು. ನಾನು 2–3 ಪ್ರಶ್ನೆಗಳನ್ನು ಮಾತ್ರ ಕೇಳುತ್ತೇನೆ. ಸ್ಯಾಚೆಟ್ಸ್‌ಗಳಲ್ಲಿ ಪ್ರತಿ ಹಳ್ಳಿಗಳಲ್ಲಿ ಸಣ್ಣ ಸಣ್ಣ ಅಂಗಡಿಗಳಲ್ಲಿ ಬೀಡಿ ಬೆಂಕಿ ಪೊಟ್ಟಣ ತೆಗೆದುಕೊಳ್ಳುವುದಕ್ಕೆ ಹೋದರೆ ಅದನ್ನು ಇಲ್ಲವೆಂದು ಹೇಳಬಹುದು ಪಾಕೆಟ್ ಇದೆಯೇ ಎಂದು ಹೇಳಿದರೆ ತೆಗೆದುಕೊಳ್ಳಿ ಸಾರ್ ಎಂದು ಹೇಳುತ್ತಾರೆ. ಅಂತಹ ಪರಿಸ್ಥಿತಿ ಇದ್ದಾಗಲೂ ಕೂಡ ಸರಕಾರದ ಅಧಿಕಾರಿಗಳು ಎಲ್ಲಿ ಸಾರಾಯಿ ಎಕ್ಸೈಸ್ ಇಲಾಖಾಧಿಕಾರಿಗಳು ಇರುತ್ತಾರೆ ಅವರು ನಮಗೆ ಇದು ಎಲ್ಲೂ ಕಂಡು ಬಂದಿಲ್ಲವೆಂದು ಹೇಳುತ್ತಾರೆ. ಇದನ್ನು ನನ್ನ ಮುಂದೆ ಹೇಳಿದ್ದಲ್ಲ. ಇದನ್ನು ಸಬಾರ್ಡಿನೇಟ್ ಲೆಜಿಸ್ಲೇಷನ್ ಸಮಿತಿ ತನ್ನ 18ನೇ ವರದಿಯಲ್ಲಿ ಕೊಟ್ಟಿದೆ (92–93) ಆ ವರದಿಯಲ್ಲಿ ಇದನ್ನು ಹೇಳುತ್ತಾರೆ. ಆಗ ಆಡಳಿತ ಪಕ್ಷದ ಸದಸ್ಯರೊಬ್ಬರಾದ ಶ್ರೀ ಕಲ್ಮಣಕರ್‌ರವರು ಈ ರೀತಿ ದೊರೆಯುವುದನ್ನು ಕಂಡು ಕೊಡುತ್ತಾರೆ, ಆಗ ಇವರು ಒಪ್ಪಿಕೊಳ್ಳುತ್ತಾರೆ. ಇಡೀ ರಾಜ್ಯದಲ್ಲಿ ಇದು ಇದೆ ಎಂದು ಸಮಿತಿ ತಮ್ಮ ವರದಿಯಲ್ಲಿ ಹೇಳಿದೆ. ಇಷ್ಟೆಲ್ಲಾ ಆದರೂ ಸರಕಾರದ ಅಧಿಕಾರಿಗಳು ನಮ್ಮ ಗಮನಕ್ಕೆ ಬಂದಿಲ್ಲವೆಂದು ಹೇಳುವುದಾದರೆ ಇದು ಬಹಳ ವಿಪರ್ಯಾಸವಾದುದು ಇದರಲ್ಲಿ ಅರ್ಥ ಇದೆಯೇ? ಪ್ರತಿ ಊರಿನಲ್ಲಿ ಅಂಗಡಿಗಳಲ್ಲಿ ಅಧಿಕೃತ ಅನಧಿಕೃತ ಎರಡೂ ಅಂಗಡಿಗಳಲ್ಲೂ ಸಿಗುತ್ತದೆ. ಈ ಅಕ್ರಮವಾದ ಸಾರಾಯಿ ತಯಾರು ಮಾಡುವುದನ್ನು ನಿಲ್ಲಿಸುವಂತಹ ಕ್ರಮ ತೆಗೆದುಕೊಂಡರೆ ಒಳ್ಳೆಯದು. ನಮ್ಮ ಸೋರಿಕೆ 1 ಸಾವಿರ, 800 ಕೋಟಿ ಆಗುತ್ತದೆ ಅದನ್ನು ನಿಲ್ಲಿಸುವುದಕ್ಕೆ ಸಾಧ್ಯವಿದೆ, ಇದನ್ನು ತಡೆಹಿಡಿಯಬೇಕೆಂದು ನಿಜವಾಗಲೂ ಸರಕಾರಕ್ಕೆ ಆಸಕ್ತಿ ಇದೆಯೇ ಇದ್ದರೆ ಅದನ್ನು ನಿಲ್ಲಿಸಲು ಮೊಟ್ಟ ಮೊದಲು ತಾವು ಮಾಡಬೇಕಾದುದು ಏನು ಎಂದರೆ ಕೈಗಾರಿಕಾ ಉದ್ದೇಶಕ್ಕೋಸ್ಕರ ರೆಕ್ಟಿಫೈಡ್ ಸ್ಪಿರಿಟ್ ಏನು ಕೊಡುತ್ತಿದ್ದೀರಿ ಅದರಲ್ಲಿ ನೂರಕ್ಕೆ 90 ಭಾಗ ದುರುಪಯೋಗವಾಗುತ್ತದೆ. ನಮ್ಮ ಸರಕಾರವಿದ್ದಾಗ ಕೊಟ್ಟಿರಬಹುದು ನಿಮ್ಮ ಸರಕಾರವಿದ್ದಾಗ

ಕೊಡಬಹುದು, ಇಲ್ಲವೇ ಬೇರೆ ಯಾವುದೇ ಸರಕಾರವಿದ್ದಾಗ ಕೊಡಬಹುದು ಕೈಗಾರಿಕಾ ಉದ್ದೇಶಕ್ಕೋಸ್ಕರ ಇದನ್ನು ಉಪಯೋಗಿಸುತ್ತಿಲ್ಲ ಇದರ ಬದಲಾಗಿ ಅದಕ್ಕೆ ನೀರನ್ನು ಸೇರಿಸಿ ಸಾರಾಯಿ ಮಾಡುವುದಕ್ಕೆ ಉಪಯೋಗಿಸುತ್ತಿದ್ದಾರೆ. ಈ ಲೆಕ್ಕ ಏನು ಇದೆ ಇದೆಲ್ಲವನ್ನೂ ಲೆಕ್ಕಕ್ಕೆ ತೆಗೆದುಕೊಂಡಾಗ ಈ ಸಾರಾಯಿ ಪ್ರಮಾಣ ಏನು ಇದೆ ಅದು ಜಾಸ್ತಿಯಾಗುತ್ತಿದೆ ಮತ್ತು ಅದರಿಂದ ಹೆಚ್ಚಿನ ಆದಾಯ ಬರುವುದಕ್ಕೆ ಸಾಧ್ಯ ಇದೆ. ಈ ಬಗ್ಗೆ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ. ಹಿಂದೆ ಅನೇಕ ಸಂದರ್ಭಗಳಲ್ಲಿ ತಾವು ಸಮಿತಿಯನ್ನು ನೇಮಕ ಮಾಡಿದ್ದೀರಿ. ಕೈಗಾರಿಕಾ ಉದ್ದೇಶಕ್ಕೋಸ್ಕರವಾಗಿ ಏನು ರೆಕ್ಟಿಫೈಡ್ ಸ್ಪಿರಿಟ್ ಕೊಡುತ್ತೀರಿ ಅವರಿಗೆ ಕೈಗಾರಿಕೆಗಳೇ ಇಲ್ಲ. ಆ ರೆಕ್ಟಿಫೈಡ್ ಸ್ಪಿರಿಟ್ ದುರುಪಯೋಗವಾಗುತ್ತದೆಂಬ ಮಾತನ್ನು ಹೇಳಿದಾಗ ತದನಂತರ ಅದೇ ಕೈಗಾರಿಕೆಗಳಿಗೆ ಅಂದರೆ ಯಾವುದಕ್ಕೆ ಕೊಡಬೇಡಿ ಎಂದು ಸಮಿತಿ ಶಿಫಾರಸ್ಸು ಮಾಡಿತ್ತೋ ಅದೇ ಕೈಗಾರಿಕೆಗಳಿಗೆ ರೆಕ್ಟಿಫೈಡ್ ಸ್ಪಿರಿಟ್ ಅನ್ನು ಕೊಟ್ಟಿದ್ದೀರಿ, ಏತಕ್ಕೋಸ್ಕರ ಯಾವ ಕಾರಣಕ್ಕೋಸ್ಕರ ಕೊಟ್ಟಿದ್ದೀರಿ? ಅದೆಲ್ಲವನ್ನೂ ಗಮನಿಸಿದಾಗ ಅಧಿಕಾರದಲ್ಲಿದ್ದಂತಹ ಜನ ಯಾವ ರೀತಿ ಅಂದರೆ ಅವರು ಯಾವುದೇ ಪಕ್ಷಕ್ಕೆ ಸೇರಿದ್ದರೂ ಕೂಡ ಸಂಬಂಧಪಟ್ಟವನೊಂದಿಗೆ ಶಾಮೀಲಾಗಿ ಈ ವ್ಯವಸ್ಥೆ ಮುಂದುವರಿಯಲಿಕ್ಕೆ ನಾವು ನೀವೆಲ್ಲರೂ ಅನುವು ಮಾಡಿಕೊಟ್ಟಿದ್ದೇವೆ. ಪ್ರತ್ಯಕ್ಷವಾಗಿ ಪರೋಪಕ್ಷವಾಗಿ ಅಥವಾ ನಾವೆಲ್ಲರೂ ಅದಕ್ಕೆ ಹೊಂದಿಕೊಂಡಿರುವುದರಿಂದ ಈ ಪರಿಸ್ಥಿತಿ ಇದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ.

1.10 ಪಿ.ಎಂ.

ಇದನ್ನು ತಾವೇನಾದರೂ ಮಾಡಲಿಕ್ಕೆ ಪ್ರಯತ್ನ ಮಾಡಿದರೆ ತಾವು ಒಂದು ಸಮಗ್ರವಾದ ನೀತಿಯನ್ನು ಅನುಸರಿಸುತ್ತೀರಾ? ಅದಕ್ಕೆ ಬೇಕಾದಂಥ ಹೊಸ ಒಂದು ಇಲಾಖೆಯನ್ನು ಪುನರ್ ಸಂಘಟನೆ ಮಾಡಲಿಕ್ಕೆ ಬೇಕಾದಂಥ ಅಧಿಕಾರವನ್ನು ನಮ್ಮನ್ನು ಕೇಳಲಿಕ್ಕೆ, ನಮ್ಮ ಒಪ್ಪಿಗೆ ಇದ್ದರೂ ಸಹ ಕೇವಲ ಅದರ ನೆಪದಲ್ಲಿ ತಾವು ಹಣವನ್ನು ಹೆಚ್ಚು ಖರ್ಚು ಮಾಡುವುದಕ್ಕೆ ಇವತ್ತಿನ ದಿವಸ ತಾವು ಅದರ ಬಗ್ಗೆ ಸೂಕ್ತವಾದ, ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳುತ್ತೀರಾ? ತೆಗೆದುಕೊಳ್ಳುವುದಾದರೆ ಸ್ವಾಮಿ ತಮ್ಮ ಮುಂದಿನ ಚಿಂತನೆ ಏನು ಎಂಬುದರ ಬಗ್ಗೆ ಹೇಳಬೇಕು. ಅದಕ್ಕಿಂತ ಹೆಚ್ಚಿಗೆ ಹಿಂದಿನ ಸರ್ಕಾರದ ಮೇಲೆ ಆರೋಪ ಮಾಡುತ್ತಿದ್ದೀರಿ, ಆದರೆ ಪ್ರತ್ಯಾರೋಪ ಮಾಡುತ್ತಿಲ್ಲ. ತಾವು ಇತ್ತೀಚಿನ ದಿವಸಗಳಲ್ಲಿ ಬಾಟ್ಲಿಂಗ್ ದರವನ್ನು ಏರಿಸತಕ್ಕಂಥದ್ದು ಒಂದು ತೀರ್ಮಾನ ತೆಗೆದುಕೊಂಡಿದ್ದೀರಿ. ಇದು ಯಾರಿಗೆ ಉಪಯೋಗವಾಗುತ್ತದೆ? ಯಾರು ಯಾರು ಒಂದು ಲೀಟರ್‌ಗೆ ಮೂರು ರೂಪಾಯಿ ಹೆಚ್ಚಿಗೆ ಕೊಡುವಂಥ ಒಂದು ನಿರ್ಣಯವನ್ನು ತೆಗೆದುಕೊಂಡಿರುತ್ತೀರಿ ಇದರಿಂದ ಕುಡಿಯುವರಿಗೆ ಕಡಿಮೆ ದರದಲ್ಲಿ ಕೊಟ್ಟಂತಾಗಲಿಲ್ಲ. ಅದಕ್ಕೆ ಬದಲಾಗಿ ಯಾರು ಬಾಟ್ಲಿಂಗ್ ಮಾಡುತ್ತಾರೋ ಯಾರು ಬಾಟ್ಲಿಂಗ್ ತೆಗೆದುಕೊಂಡಿರುತ್ತಾರೋ ಅವರಿಗೆ ಕೋಟಿಗಟ್ಟಲೆ ಹಣವನ್ನು ಮಾಡಿಕೊಡುವುದಕ್ಕೆ ಸಹಾಯ ಮಾಡುವಂಥ ಕೃತ್ಯ ಸರ್ಕಾರದ್ದಾಗಿದೆ. ಇದು ಅಷ್ಟೇ ಅಲ್ಲದೆ ಇವತ್ತಿನ ದಿವಸ ಅವರಿಗೆ ಬಾಟ್ಲಿಂಗ್ ಮಾಡುವುದಕ್ಕೆ ಕೊಟ್ಟಂಥ ರೆಕ್ಟಿಫೈಡ್ ಸ್ಪಿರಿಟ್‌ನ್ನು ಅವರು ಸ್ಯಾಚೆಟ್‌ಗಳಲ್ಲಿ ಹಾಕಿ ಇವತ್ತಿನ ದಿವಸ ಕೊಟ್ಯಾಧೀಶ್ವರರಾಗುವುದಕ್ಕೆ ತಾವು ಅನುವು ಮಾಡಿಕೊಟ್ಟಿದ್ದೀರಿ. ಆದ್ದರಿಂದ ಇದರ ಬಗ್ಗೆ ಏನಾದರೂ ಸರ್ಕಾರ ಮಾಡಲು ಚಿಂತನೆ ಮಾಡುತ್ತಿದೆಯೇ? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿವರಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ನಿನ್ನೆಯ ದಿವಸ ವಿಧಾನ ಪರಿಷತ್ತಿನಲ್ಲಿ ಮತ್ತು ಇವತ್ತಿನ ದಿವಸ ನಮ್ಮ ಸಭೆಯಲ್ಲಿ ಮಾತನಾಡಿ 15 ದಿವಸಗಳ ಸಮಯ ಕೊಡಿ, ನಾನು ಇದನ್ನೆಲ್ಲಾ ಸರಿ ಮಾಡುತ್ತೇನೆಂದು ಹೇಳಿದರು. ಒಂದೇ ದಿವಸ ಮಾಡಲಿಕ್ಕೆ ನಾನೇನು ಅಭಿಮನ್ಯು ಆಗುವುದಿಲ್ಲವೆನ್ನತಕ್ಕಂಥ ಮಾತನ್ನು ಸಹ ಹೇಳಿದ್ದಾರೆ. ಈ

ಸಾರಾಯಿಯಾಗಲಿ, ಐ.ಎಮ್.ಎಫ್.ಎಲ್ ಆಗಲಿ ಅಥವಾ ಹೊರ ರಾಜ್ಯಗಳಿಂದ ಬರತಕ್ಕಂಥ ಮದ್ಯಪಾನಗಳಾಗಲಿ ಅದನ್ನು ತಡೆಗಟ್ಟ ತಕ್ಕಂಥದ್ದು ಅಷ್ಟೊಂದು ಸುಲಭವಾದ ಕೆಲಸವಲ್ಲ. ಬಹಳ ಕಷ್ಟವಾದ ಕೆಲಸ. ಜೊತೆಗೆ ಸರ್ಕಾರಕ್ಕೆ ಬರುತ್ತಿರತಕ್ಕಂಥ ಆದಾಯ ಏನಿದೆ ಆ ಆದಾಯವನ್ನು ಹೆಚ್ಚು ಮಾಡುವ ದೃಷ್ಟಿಯಿಂದ ತಾವು ಎಲ್ಲಾ ಪ್ರಯತ್ನ ಮಾಡಬೇಕಾಗುತ್ತದೆ, ಇದು ಸರಿಯಾದ ಕ್ರಮವೇ ಎಂದು ಹೇಳಿದಿರಿ. ನಾನಾದರೂ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಪಾನನಿರೋಧವನ್ನು ಸಂಪೂರ್ಣವಾಗಿ ತರಲಿಕ್ಕೆ ಪ್ರಯತ್ನ ಮಾಡಬೇಕು. ಸಂಪೂರ್ಣವಾಗಿ ತೆಗೆಯಲು ಏತಕ್ಕೆ ಈ ದೃಷ್ಟಿಯಲ್ಲಿ ಲೆಕ್ಕಾಚಾರ ಹಾಕಬಾರದು. ಗುಜರಾತ್ ರಾಜ್ಯದಲ್ಲಿ ಸರ್ಕಾರ ನಡೆಯುತ್ತಿಲ್ಲವೆ? ನನಗೆ ಗೊತ್ತಿರುವ ಹಾಗೆ ಗುಜರಾತ್ ರಾಜ್ಯದ ಹಣಕಾಸಿನ ಪರಿಸ್ಥಿತಿ ನಮಗಿಂತಲೂ ಚೆನ್ನಾಗಿದೆ. ಬಹುಶಃ ಇಲ್ಲಿ ಬಹಳಷ್ಟು ಜನ ಒಪ್ಪುವುದಿಲ್ಲವೆನ್ನತಕ್ಕಂಥದ್ದು ನನಗೆ ಗೊತ್ತಿದೆ. ಆದರೂ ಸಹಿತ ಈ ದೃಷ್ಟಿಯಲ್ಲಿ ನೀವು ಪ್ರಯತ್ನವನ್ನಾದರೂ ಏತಕ್ಕೆ ಮಾಡಬಾರದು? ಸಾರಾಯಿಯಿಂದ ಬರತಕ್ಕಂಥ ಪಾಪದ ಹಣವನ್ನು ಉಪಯೋಗಿಸಿಕೊಂಡು ತಾವು ಏತಕ್ಕೆ ಸರ್ಕಾರವನ್ನು ನಡೆಸಬೇಕು. ಹೆಂಡದಿಂದ ಬರತಕ್ಕಂಥ ಪಾಪದ ಹಣದಿಂದ ತಾವು ಏತಕ್ಕೆ ಸರ್ಕಾರವನ್ನು ನಡೆಸಬೇಕು. ಸಂಪೂರ್ಣವಾಗಿ ನೀವು ಪಾನನಿರೋಧವನ್ನು ಜಾರಿಯಲ್ಲಿ ತರಲಿಕ್ಕೆ ಈ ರಾಜ್ಯದಲ್ಲಿ ಪ್ರಯತ್ನ ಏತಕ್ಕೆ ಮಾಡಬಾರದೆಂದು ಇಲ್ಲಿ ನಾನು ಈ ಸಭೆಯಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸಿ. ಬೈರೇಗೌಡ:– ಈ ಇಲಾಖೆಯನ್ನು ಜಾಯಿಂಟ್ ಕಮೀಷನರ್ ಸಂಸ್ಥೆ ಎಂದು ಮಾಡುವುದಕ್ಕೆ ಹೊರಟ್ಟಿದ್ದೀರಿ? ಇದರಿಂದ ಅದು ಒಂದು ಅರ್ಥವಿಲ್ಲದ ವ್ಯವಸ್ಥೆಯಾಗುತ್ತದೆ. ಏತಕ್ಕೆಂದರೆ ಅಲ್ಲಿ ಇನ್ಸ್‌ಪೆಕ್ಟರ್ ಬೇಕಾಗುತ್ತದೆ ಸಬ್‌ಇನ್‌ಸ್ಪೆಕ್ಟರ್ ಬೇಕಾಗುತ್ತದೆಂದು ಹೇಳುವುದರಲ್ಲಿ ಅರ್ಥವಿಲ್ಲ. ಇಲಾಖೆಯನ್ನು ಬಲಪಡಿಸುವುದನ್ನು ಬಿಟ್ಟು, ಬೆಂಗಳೂರಿನಲ್ಲಿ ಇಲ್ಲಿ ಏರ್ ಕಂಡೀಷನ್ ಆಫೀಸ್‌ನಲ್ಲಿ ಕುಳಿತು ತಾವು ಸೆಕೆಂಡ್ಸ್‌ನ್ನು ನಿಲ್ಲಿಸುವುದಕ್ಕೆ ಜಾಯಿಂಟ್ ಕಮೀಷನ್....

ಶ್ರೀ ಹೆಚ್. ಏಕಾಂತಯ್ಯ:– ಎಲ್ಲಾ ರಾಜ್ಯಗಳಲ್ಲಿಯೂ ಇದು ಇದ್ದುದ್ದೆ. ಆದ್ದರಿಂದ ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಮಾಡಲಿ, ಮಾಡಬಾರದೆಂದು ಇಲ್ಲ. ಆದರೆ ನಾನು ಹೇಳುವುದೇನೆಂದರೆ ಕೇವಲ ಎಕ್ಸ್‌ಸೈಗೆ ಮಾತ್ರ ಜಾಯಿಂಟ್ ಕಮೀಷನರ್ ಮಾಡುವುದಿಲ್ಲ. ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಮಾಡಲಿ, ಮುಖ್ಯ ಉದ್ದೇಶ ಈ ಇಲಾಖೆಯನ್ನು ಸರಿಯಾಗಿ ನಡೆಸುವ ದೃಷ್ಟಿಯಿಂದ ಕೆಳಹಂತದ ಅಧಿಕಾರಿಗಳು ಬೇಕಾಗುತ್ತದೆ. ಅದರ ಬಗ್ಗೆ ಗಮನಹರಿಸಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ:– ಕೆಳಹಂತದ ಅಧಿಕಾರಿಗಳನ್ನು ಹೆಚ್ಚಿಗೆ ಮಾಡಿ. ಅದನ್ನು ತಹಬಂದಿಗೆ ತರಬೇಕು. ಆ ಕೆಲಸ ಬಿಟ್ಟು ತಲೆಶಿರೋಬಾರ ಎಂದು ಹೇಳಿ ತಲೆಯನ್ನು ದೊಡ್ಡದು ಮಾಡಿಕೊಳ್ಳುವುದಕ್ಕೆ ಹೊರಟಿದ್ದೀರಿ. ಅದು ಅರ್ಥವಿಲ್ಲದಿರತಕ್ಕಂಥ ಕೆಲಸ, ಅದನ್ನು ಕೈಬಿಟ್ಟು ಕೆಳಹಂತದಲ್ಲಿರತಕ್ಕಂಥ ವ್ಯವಸ್ಥೆ ಏನಿದೆ ಅದನ್ನು ಬಲಪಡಿಸಿದರೆ ಸೋರಿಹೋಗುವಂಥದ್ದನ್ನು ತಡೆಗಟ್ಟಲು ಸಹಾಯವಾಗುತ್ತದೆ. ಅದರ ಬಗ್ಗೆ ಏನು ಹೇಳುತ್ತೀರಿ ಹೇಳಿ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಅನೇಕ ಮಾನ್ಯ ಸದಸ್ಯರು ಸೂಚನೆಗಳನ್ನು ಕೊಟ್ಟಿದ್ದಾರೆ ಮತ್ತು ವಿಮರ್ಶೆ ಕೂಡ ಮಾಡಿದ್ದಾರೆ. ಇದರಲ್ಲಿ ಕೆಲವು ವಿಚಾರಗಳು ನೀತಿಗೆ ಸಂಬಂಧಪಟ್ಟದ್ದದು ಇದೆ. ಅದರ ಬಗ್ಗೆ ಹೇಳಲಿಕ್ಕೆ ಹೊರಟು ಈಗಲೇ ಸರಿ ಮಾಡುತ್ತೇವೆಂದು ಅಲ್ಲ. ಇರತಕ್ಕ ನೀತಿಯನ್ನು ಸರಿಪಡಿಸದಿದ್ದರೆ ಕೆಲವು ಲೋಪದೋಷಗಳನ್ನು ಪರಿಹಾರ ಮಾಡುವುದಕ್ಕಾಗುವುದಿಲ್ಲ. ಬಾಟ್ಲಿಂಗ್ ಇದೆ; ಬಾಟ್ಲಿಂಗ್‌ನಲ್ಲಿ ಏನಾಗಿದೆ ಎಂದು ನಮಗೆ, ತಮಗೆ ಎಲ್ಲಾ ಗೊತ್ತಿದೆ. ಅದು ಒಂದು ರೀತಿ ಬಾಟ್ಲಿಂಗ್ ಎಂದು ಕಾಂಟ್ರಾಕ್ಟ್

ತೆಗೆದುಕೊಳ್ಳುವುದು, ಕಮಿಷನ್ ತೆಗೆದುಕೊಳ್ಳುವುದು, ಬೇನಾಮಿ ವ್ಯವಹಾರ ಎಲ್ಲಾ ಇದೆ. ಅದನ್ನು ನಾನು ಈಗ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಏನಿದೆ ಎಂದು ಖಂಡಿತವಾಗಿ ಹೇಳುತ್ತೇನೆ. ಮುಖ್ಯವಾಗಿ ಅಲಾಟ್‌ಮೆಂಟ್ ಆಫ್ ರೆಕ್ಟಿಫೈಡ್ ಸ್ಪಿರಿಟ್ ಏನಿದೆ ಇದನ್ನು ನವೆಂಬರ್ 20ರಿಂದ ನಾವು ಎಲ್ಲಾ ಕೆಮಿಕಲ್ ಯೂನಿಟ್ಸ್, ಎಕ್ಸಪ್ಟ್ ಫಾರ್ಮಾಸೂಟಿಕಲ್ಸ್, ಬಲ್ಕ್‌ಡ್ರಗ್ ಮ್ಯಾನ್ಯುಫ್ಯಾಕ್ಚರರ್ಸ್, ಉಳಿದುದಕ್ಕೆ ರೆಕ್ಟಿಫೈಡ್ ಸ್ಪಿರಿಟ್ ಸಪ್ಲೈ ಮಾಡುವುದು ನಿಲ್ಲಿಸಿದ್ದೇವೆ. ನಾವು ಅಧಿಕಾರ ತೆಗೆದುಕೊಂಡ ದಿನದಿಂದ ಇದನ್ನು ನಿಲ್ಲಿಸಿದ್ದೇವೆ. ಯಾವ ಕೆಮಿಕಲ್ ಯೂನಿಟ್ಸ್‌ಗೂ ಇದು ಸಪ್ಲೈ ಆಗುತ್ತಿಲ್ಲ. ತಾವು ಹೇಳಿದ್ದುದು ಸರಿ, ಡ್ರಗ್ ಎಂದು ಹೇಳಿ ಅದನ್ನು ಚಲಾವಣೆ ಮಾಡುತ್ತಾರೆ ಎಂದು.

ಶ್ರೀ ವೈ.ಕೆ. ರಾಮಯ್ಯ:- ನಾನು ತಮ್ಮ ನಿರ್ಧಾರಕ್ಕೆ ಅಭಿನಂದಿಸುತ್ತೇನೆ, ಅದನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಡ್ರಗ್ ವಿಚಾರದಲ್ಲಿ, ಅದನ್ನು ಬೇರೆ ರೀತಿಯಲ್ಲಿ ಉಪಯೋಗ ಮಾಡುತ್ತಾರೆಂದು ಹೇಳಿದಿರಿ. ಅಂಥದ್ದು ಇದ್ದರೆ ಸರಿಯಾಗಿ ಕಡಿವಾಣ ಹಾಕುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- 20ನೇ ತಾರೀಖು ರೆಕ್ಟಿಫೈಡ್ ಸ್ಪಿರಿಟ್ ಕೊಡುವುದನ್ನು ನಿಲ್ಲಿಸಿದ್ದೇವೆಂದು ಹೇಳುತ್ತಿದ್ದೀರಿ; ಆದರೆ ಪತ್ರಿಕೆಗಳಲ್ಲಿ ವರದಿ ಬಂದಿದೆ ರೆಕ್ಟಿಫೈಡ್ ಸ್ಪಿರಿಟ್ ಬೇರೆ ರಾಜ್ಯಗಳಿಗೆ ಹೋಗುತ್ತಿದ್ದುದನ್ನು ಹಿಡಿದಿದ್ದಾರೆ ಎಂದು. ಅದು ಎಲ್ಲಿಂದ ಇಶ್ಯೂ ಆಯಿತು? ಸ್ಕೇರ್ಸಿಟಿ ಇರತಕ್ಕದ್ದು ಬೇರೆ ರಾಜ್ಯಗಳಲ್ಲಿ, ಎಕ್ಸಸ್ ಇರುವುದು ನಮ್ಮ ರಾಜ್ಯದಲ್ಲಿ. ನೀವು ಕೊಡದೇ ಹೋದರೆ ಎಲ್ಲಿಂದ ಹೋಯಿತು?

ಶ್ರೀ ಸಿ. ಬೈರೇಗೌಡ:- ಉತ್ತರ ಪ್ರದೇಶದಿಂದ ಬರುತ್ತಿದೆ, ಮಹಾರಾಷ್ಟ್ರದಿಂದ ಬರುತ್ತಿದೆ; ಪಟ್ಟಿ ಕೊಡುತ್ತೇವೆ....

ಶ್ರೀ ಎಂ. ವೀರಪ್ಪ ಮೊಯಿಲಿ:- ನಾವು ಕೊಡುವುದು ನಿಲ್ಲಿಸಿದ್ದೇವೆ. ಎಕ್ಸೆಪ್ಟ್ ಫಾರ್ಮಾಸ್ಯೂಟಿಕಲ್ಸ್ ಮತ್ತು ಬಲ್ಕ್ ಡ್ರಗ್ ಮ್ಯಾನ್ಯುಫ್ಯಾಕ್ಚರರ್ಸ್‌ಗೆ ಎಲ್ಲಿಂದ ಬರುತ್ತದೆಂದು ಹುಡುಕೋಣ. ಬೇರೆ ಬೇರೆ ರಾಜ್ಯಗಳಿಂದ ಬರಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಬೇರೆ ರಾಜ್ಯಗಳಿಂದ ಅಂದರೆ ಎಲ್ಲಿ ಎಕ್ಸಸ್ ಮೊಲ್ಯಾಸಿಸ್ ಇದೆ, ಉತ್ತರ ಪ್ರದೇಶ ಇರಬಹುದು, ಮಹಾರಾಷ್ಟ್ರ ಇರಬಹುದು, ಇಲ್ಲಿಂದ ಹೋಗತಕ್ಕದ್ದು ಅಲ್ಲ. ನಮ್ಮ ರಾಜ್ಯದಲ್ಲಿ ಕೊಟ್ಟಿರತಕ್ಕ ರೆಕ್ಟಿಫೈಡ್ ಸ್ಪಿರಿಟ್ ಹಿಡಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿದೆ. ಅದು ಎಲ್ಲಿಂದ ಇಶ್ಯೂ ಆಯಿತು?

ಶ್ರೀ ಸಿ. ಬೈರೇಗೌಡ:- ಕೆಲವರಿಗೆ ಡಿಸ್ಟಿಲರೀಸ್‌ಗೆ ಕೊಟ್ಟಿದ್ದಾರೆ. ಕೆಲವರಿಗೆ ರೆಕ್ಟಿಫೈಡ್ ಸ್ಪಿರಿಟ್ ತಯಾರಿಸತಕ್ಕ ಲೈಸೆನ್ಸ್ ಕೊಟ್ಟಿದ್ದಾರೆ. ಡಿಸ್ಟಿಲರೀಸ್‌ಗಳಲ್ಲಿ ಮೊಲ್ಯಾಸಿಸ್ ಗ್ರೇಡ್‌ವೈಸ್ ಇದೆ. ಒಂದು ಟನ್ ಮೊಲ್ಯಾಸಿಸ್ ಗ್ರೇಡ್ ಪ್ರಕಾರ ಇಷ್ಟಿಷ್ಟು ಬರುತ್ತದೆಂದು ಇದೆ. ಟೆಕ್ನಿಕಲ್ ಮ್ಯಾನ್ಯುಯಲ್ ಪ್ರಕಾರ ಉತ್ಪತ್ತಿಯಾಗುತ್ತಿಲ್ಲ. ಎ-ಗ್ರೇಡ್ ಮೊಲ್ಯಾಸಿಸ್, ಬಿ-ಗ್ರೇಡ್, ಸಿ-ಗ್ರೇಡ್ ಎಂದು ಮಾಡುತ್ತಾರೆ. ಆದರಲ್ಲಿ ರೆಕ್ಟಿಫೈಡ್ ಸ್ಪಿರಿಟ್ ಬರುತ್ತದೆ, ಆದರಲ್ಲಿ ಸೆಕಂಡ್ಸ್ ಆಗುತ್ತಿದೆ. ಇದರಲ್ಲಿ ದೊಡ್ಡ ವ್ಯವಹಾರ ಆಗುತ್ತದೆ. ಮೊಲ್ಯಾಸಿಸ್ ಅನ್ನು ಎ-ಬಿ-ಸಿ. ಎಂದು ಗ್ರೇಡ್ ಮಾಡುತ್ತಿದ್ದಾರೆ. ಆದನ್ನು ಸರಿಯಾಗಿ ಇಲಾಖೆಯವರು ಹೋಗಿ ನೋಡುತ್ತಾರೆಯೆ? ಚೆನ್ನಾಗಿರುವುದು ಬಿ, ಆದಕ್ಕಿಂತ ಚೆನ್ನಾಗಿರುವುದು ಎ-ಗ್ರೇಡ್. ಆದಕ್ಕೆ ಬದಲಾಗಿ ಬೇರೆಯದನ್ನು ಸೇರಿಸುತ್ತಾರೆ, ಸಿ-ಗ್ರೇಡ್ ಎಂದು ಹೇಳುತ್ತಾರೆ. ಪ್ರಾರಂಭವಾಗುವುದೇ ಅಲ್ಲಿಂದ.

ಶ್ರೀ ಎಂ. ವೀರಪ್ಪ ಮೊಯಿಲಿ:– ಅದಕ್ಕೇ ಪ್ರಾರಂಭದಲ್ಲಿ ಉತ್ತರ ಕೊಡುವಾಗ ಹೇಳಿದೆ. ಕೆಲವು ಡಿಫೆಕ್ಟೀವ್ ಪಾಲಿಸಿ ಇದೆ. ಆ ಪಾಲಿಸಿಯನ್ನು ಚೇಂಜ್ ಮಾಡುತ್ತೇವೆಂದು ಹೇಳುವುದಕ್ಕೆ ಬರುವುದಿಲ್ಲ. ಸಮಗ್ರವಾಗಿ ಆಬ್ಕಾರಿ ನೀತಿಯನ್ನು ಬದಲಾವಣೆ ಮಾಡದಿದ್ದರೆ ಎಲ್ಲೆಲ್ಲಿ ಈ ರೀತಿ ಲೋಪದೋಷಗಳಿವೆ ಅದನ್ನೆಲ್ಲ ನೋಡಿ ಹಿಡಿಯದಿದ್ದರೆ ಇದು ಸಾಧ್ಯವಾಗುವುದಿಲ್ಲ. ಆದರೂ ಕೆಲವು ದೋಷಗಳು ಇರುತ್ತವೆ. ಒಂದು ಕಡೆ ಹಿಡಿದರೆ ಮತ್ತೊಂದು ಕಡೆ ಇರುತ್ತವೆ. ಅದಕ್ಕಾಗಿ I would like to launch totally integrated restructuring of the policy on this Excise.. ಇದು ಮಾಡದೆ ನಾನು ನೂರಕ್ಕೆ ನೂರು ಪಾಲು ಸರಿ ಮಾಡುತ್ತೇನೆಂದರೆ ಆಗುವುದಿಲ್ಲ. ನೀವು ಅದನ್ನು ಎಲ್ಲಿ ತಡೆಹಿಡಿಯುತ್ತೀರೆಂದರೆ, ಈ ವ್ಯವಸ್ಥೆಯನ್ನು ಸರಿ ಮಾಡದಿದ್ದರೆ ಆಗುವುದಿಲ್ಲ. ಎಲ್ಲಾ ಕಡೆ ತಪ್ಪಿಸಿಕೊಂಡು ಹೋಗುತ್ತಾರೆ. ಇನ್ನು ಸಾಕೆಟ್ ಬಗ್ಗೆ ಹೇಳಿದಿರಿ. ನಾನು ಅದನ್ನು 15 ದಿನಗಳಲ್ಲಿ ನಿಲ್ಲಿಸುತ್ತೇನೆಂದು ಹೇಳಲಿಲ್ಲ. ಸಾಕೆಟ್ಸ್ ಬಗ್ಗೆ ಏನು ಮಾಡುತ್ತೇವೆಂದು ಹೇಳಿದರೂ ಅವರು ತಪ್ಪಿಸಿಕೊಳ್ಳುತ್ತಾರೆ. ಹತ್ತು ಹದಿನೈದು ದಿನಗಳಲ್ಲಿ totally put an end to sachets. That is the maximum time. ನಾಳೆಯಿಂದ ಪರಿಣಾಮ ನೋಡಿ ಎಂದು ಬೈರೇಗೌಡರಿಗೆ ಹೇಳಿದೆ. ಯಾವ ಅಧಿಕಾರಿಯ ಜ್ಯೂರಿಸ್‌ಡಿಕ್ಷನ್‌ನಲ್ಲಿ ಸ್ಯಾಚೆಟ್ಸ್ ಉಪಯೋಗ ಮಾಡಿದ ಸ್ಥಿತಿ ಬಂದಾಗ first thing is, I will keep that Officer under suspension which I am going to do and you will observe.

ಶ್ರೀ ಸಿ. ಬೈರೇಗೌಡ:– ಇದಕ್ಕೆ ತಮಗೆ ಹೃತ್ಪೂರ್ವಕ ವಂದನೆಗಳು.

ಶ್ರೀ ಎಂ. ವೀರಪ್ಪ ಮೊಯಿಲಿ:– ಇದನ್ನು ನಾವು ಮಾಡುತ್ತೇವೆ. He will be personally held responsible. We will put that officer under suspension. ಸ್ಯಾಚೆಟ್ಸ್ ಉಪಯೋಗ ಮಾಡತಕ್ಕ ಪರಿಸ್ಥಿತಿ ಬಂದರೆ we will not spare anybody. You will see it. This action will commence from the day one. And within 15 days it will be in perfect order. ಆದರೆ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆ ಮಾತ್ರ ತಮಗೆ ಗೊತ್ತಿದೆ. ಅದಕ್ಕೆ, ಇದರ ಬಗ್ಗೆ ಬಾಟ್ಲಿಂಗ್ ಪ್ಲಾಂಟ್ ವಿಚಾರ ಇದೆ, ಮತ್ತೊಂದು ವಿಚಾರ ಇದೆ. ಬೇರೆ ಬೇರೆ ರೀತಿಯ ವಿಚಾರಗಳು, ಮೊಲ್ಯಾಸಸ ವಿಚಾರ ಇದೆ. ಇದನ್ನೆಲ್ಲಾ ಕಂಟ್ರೋಲ್‌ಗೆ ತರಬೇಕಾಗುತ್ತದೆ. ಅಡಿಷನಲ್ ಕಮೀಷನರ್, ಜಾಯಿಂಟ್ ಕಮೀಷನರ್ ವಿಚಾರ ಹೇಳಿದಿರಿ. ಇಷ್ಟರವರೆಗೆ ಏನೂ ಆಗಿಲ್ಲ.

ಶ್ರೀ ಸಿ. ಬೈರೇಗೌಡ:– ಕೆಳಹಂತದಲ್ಲಿ ಬಲಪಡಿಸಬೇಕು. ಮೇಲಿನ ಹಂತದಲ್ಲಿ ಮಾಡುವುದರಿಂದ ಆಗುವುದಿಲ್ಲ.

ಶ್ರೀ ಎಂ ವೀರಪ್ಪ ಮೊಯಿಲಿ:– ಮೇಲಿನ ಹಂತದಲ್ಲಿ ಆಗುವುದಿಲ್ಲ. ಜಿಲ್ಲಾಮಟ್ಟದಲ್ಲಿ ಮತ್ತು ಆಯಾಯ ತಾಲ್ಲೂಕು ಮಟ್ಟಗಳಲ್ಲಿ ಇದರ ಬಗ್ಗೆ ಸಾಕಷ್ಟು ನಾವು ಬಿಗಿ ಆಡಳಿತ ಮಾಡಬೇಕಾಗಿದೆ. ಯಾರು ಯಾರಿಗೆ ಬಿಗಿ ಆಡಳಿತವನ್ನು ಜಾರಿ ತರುವುದಕ್ಕೆ ಅಪೇಕ್ಷೆ ಪಡುವುದಿಲ್ಲ, ಇಚ್ಛೆಪಡುವುದಿಲ್ಲ, ಯಾರೇ ಅಧಿಕಾರಿಗಳು ಬೇರೆಬೇರೆ ಹಂತದಲ್ಲಿ ಇವತ್ತು ಶಾಮೀಲಾಗಿ ಈ ಅಕ್ರಮಗಳಿಗೆ ಜೊತೆಯಲ್ಲಿ ವ್ಯವಹರಿಸುತ್ತಾರೋ we will not spare these officers and this message will go from this House. They should realise that they cannot play at the cost of the people and at the cost of the Exchequer of Karnataka. ಇದಕ್ಕೆ ನಾವು ಖಂಡಿತಾ ಅವಕಾಶ ಕೊಡುವುದಿಲ್ಲ. ಇನ್ನು ಹೊರ ರಾಜ್ಯದಿಂದ ಬಂದ ಸ್ಯಾಚೆಟ್ಸ್‌ನ್ನು ನಿಗ್ರಹ ಮಾಡುವುದಕ್ಕೆ ನಾವು ಆಲ್ ರೌಂಡ್ ನೆಟ್ ತಯಾರು ಮಾಡಿದ್ದೇವೆ. ಅದನ್ನು ನಾನು ಹೇಳಿದೆ. ನಾವು ಒಂದು ವ್ಯೂಹ ರಚನೆ ಮಾಡಿ ಯಾರು ಅಕ್ರಮ ಕೆಲಸ ಮಾಡುವವರು ಇದ್ದಾರೆ ಅವರು ಹೊರಕ್ಕೆ ಬಾರದಹಾಗೆ ಗಟ್ಟಿ ಕಟ್ಟುತ್ತೇವೆಂದು. ಇಷ್ಟು ಮಾತ್ರ ಈ ಸದನದಲ್ಲಿ ಹೇಳಿ, ಮುಂದೆ

ಬರತಕ್ಕ ದಿವಸಗಳಲ್ಲಿ ಯಾವುದೇ ರೀತಿಯ ಅಕ್ರಮವನ್ನು ನಾವು ಸಹಿಸುವುದಿಲ್ಲ. ಮಾನ್ಯ ಸಿಂಧ್ಯಾ ಅವರು ಒಂದು ಮಾತನ್ನು ಹೇಳಿದರು. ಟೈಮ್ಸ್ ಆಫ್ ಇಂಡಿಯಾದಲ್ಲಿ ಒಂದು ಎಡಿಟೋರಿಯಲ್ ಬಂದಿದೆ. ಅದನ್ನು ಅವರು ಓದಿದ್ದಾರೋ ಏನೋ ಗೊತ್ತಿಲ್ಲ. ಅದರಲ್ಲಿ ಏನು ಹೇಳುತ್ತಾರೆಂದರೆ, "There is nexus between hooch dealers, politicians, and holligans in Surath in Gujarath" ಎಂದು ಹೇಳಿ ಬಂದಿದೆ. ಅದು ಯಾವ ರೀತಿಯಲ್ಲಿ ಆಗುತ್ತಿದೆ ಎಂದು ಇವತ್ತು ಗುಜಾರಾತಿನಲ್ಲಿ ಪ್ರಾಹಿಬಿಷನ್ ಇದ್ದರೂ ಅದು ನಡೆದಿದೆ. ಗುಜಾರಾತಿನಲ್ಲಿ ಪ್ರಾಹಿಬಿಷನ್ ಇಂಟ್ರಡ್ಯೂಸ್ ಮಾಡಿಕೊಂಡು ಏನಾಗುತ್ತಾ ಇದೆ ಎಂದು ಬಂದಿದೆ. ಮತ್ತು ವೈಯುಕ್ತಿಕವಾಗಿ I am for it. ಆದರೆ ಈ ಹೌಸ್‌ನಲ್ಲಿ ನಾವು ರೆಸಲ್ಯೂಷನ್ ತಂದರೆ ಎಷ್ಟು ಜನ ಬೆಂಬಲ ಕೊಡುತ್ತಾರೋ ನೋಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ತಾವು ಸದನದ ಅಭಿಪ್ರಾಯವನ್ನು ಕೇಳಿ.

ಶ್ರೀ ವಾಟಾಳ್ ನಾಗರಾಜ್:– ಗಮನ ಸೆಳೆಯುವ ಸೂಚನೆ ಬಗ್ಗೆ ತಾವು ಉತ್ತರ ಕೊಡುತ್ತಿದ್ದೀರಿ. ಇಷ್ಟೆಲ್ಲಾ ಆಕಾಶ ಭೂಮಿಗೆ ಇಳಿದು ದೊಡ್ಡ ವ್ಯಾಯಾಮ ಮಾಡುತ್ತಿದ್ದೀರಿ. ಸರ್ಕಾರಕ್ಕೆ ನಾನು ನೇರವಾಗಿ ಕೇಳುತ್ತಿದ್ದೇನೆ. ನಿಮ್ಮ ನೀತಿ, ಕಾಂಗ್ರೆಸ್ ನೀತಿ, ಮತ್ತು ಹಿಂದಿನ ನಿಮ್ಮ ನೀತಿ, ಸ್ವಾತಂತ್ರ್ಯ ಹೋರಾಟದ ನೀತಿ, ದೇಶದ ನೀತಿ ಪ್ರಕಾರ ಪಾನನಿರೋಧವನ್ನು ಜಾರಿಗೆ ತರತಕ್ಕ ಗಂಡುಗಾರಿಕೆ, ಎದೆಗಾರಿಕೆ ಇದ್ದರೆ ಅದನ್ನು ಹೇಳಿ. ಆಗಲೇ ತಾವು ಹೇಳಿದಿರಿ, ವೀರ ಅಭಿಮನ್ಯು ಆಗಬಾರದು ಎಂದು. ನಾನು ಒಪ್ಪುತ್ತೇನೆ, ಆಗಬಾರದು. ಒಳ್ಳೆಯ ಕೆಲಸ ಮಾಡುವುದಕ್ಕೆ ಹೊರಟಿದ್ದೀರಿ. ತಾಯಿಬೇರು ಕೀಳುತ್ತೇವೆಂದು ಹೇಳುತ್ತೀರಿ. ಆದುದರಿಂದ ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಆ ದೊಡ್ಡ ಜನರ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಸಂಪೂರ್ಣ ಪಾನನಿರೋಧವನ್ನು ಇಂತಹ ತಾರೀಖಿನಿಂದ, ಒಳ್ಳೆಯ ದಿವಸ ಜನವರಿ 26ರಂದು ಗಣರಾಜ್ಯೋತ್ಸವದ ದಿನದಿಂದ ಜಾರಿಗೆ ತರುತ್ತೇವೆಂದು ಧೈರ್ಯವಾಗಿ ಹೇಳಿ. ಇಂತಹ ತಾರೀಖಿನಿಂದ ಎಂದು ಸ್ಪಷ್ಟವಾಗಿ ಹೇಳಿ. ಮೊದಲನೆಯ ಮತವನ್ನು ನಾನು ನಿಮಗೆ ಕೊಡುತ್ತೇನೆ. ನೀವು ಕೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ಪಾನ ನಿರೋಧ ಮಾಡತಕ್ಕದ್ದು ಒಂದು ಕಡೆ. ಕಡಿಮೆ ಪಕ್ಷ ಅದನ್ನು ಸ್ವಲ್ಪ ನಿಯಂತ್ರಣ ಇಡಲಿಕ್ಕೆ ನೀವೆಲ್ಲಾ ಸಹಕಾರ ಮಾಡಿದರೆ ಈ ಸಮಾಜದ ಕಲ್ಯಾಣ ಜಾಸ್ತಿಯಾಗುತ್ತದೆ, ಆ ಕೆಲಸ ಮಾಡೋಣ. ಅನ್‌ಲೈಸ್ನ್ಸ್ಡ್ ಶಾಪ್‌ಗಳ ಬಗ್ಗೆ ಮಾನ್ಯ ದೇಶಪಾಂಡೆಯವರು ಹೇಳಿದ್ದಾರೆ. ಯಾವುದಾದರೂ ಅನ್ ಲೈಸೆನ್ಸ್ಡ್ ಶಾಪ್‌ಗಳು ನಡೆಯುತ್ತಿದ್ದರೆ we are going to keep that officer under suspension and seek his explanation later.

ಶ್ರೀ ಸಿ. ಬೈರೇಗೌಡ:– ಬೆಂಗಳೂರು ನಗರದಲ್ಲಿ ಅಥರೈಸ್ಡ್ ಶಾಪ್‌ಗಳು 627 ಆದರೆ 800 ಸಾರಾಯಿ ಅಂಗಡಿಗಳು ಇವೆ.

ಅಧ್ಯಕ್ಷರು:– ಅದನ್ನು ಕಡಿಮೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ:– ನನ್ನ ಮೂಲಭೂತವಾದ ಪ್ರಶ್ನೆಗೆ ಉತ್ತರ ಬಂದಿಲ್ಲ. ಔಷಧಿ ತಯಾರು ಮಾಡುತ್ತೇವೆ ಎನ್ನುವ ನೆಪದಲ್ಲಿ ರೆಕ್ಟಿಫೈಡ್ ಸ್ಪಿರಿಟ್ ತೆಗೆದುಕೊಂಡು ಕೆಲವರು ಸಾರಾಯಿ ತಯಾರು ಮಾಡುತ್ತಿದ್ದಾರೆ. ಔಷಧಿ ತಯಾರು ಮಾಡುವವರನ್ನು ಬಿಟ್ಟು ಉಳಿದವರಿಗೆ ಕೊಡುತ್ತಿರುವ ಸ್ಪಿರಿಟ್‌ನ್ನು ನಿಲ್ಲಿಸುತ್ತಿರಾ? ಔಷಧಿ ತಯಾರು ಮಾಡುವವರು ಯಾರು? ಯಾರ್ಯಾರಿಗೆ ಎಷ್ಟೆಷ್ಟು ರೆಕ್ಟಿಫೈಡ್ ಸ್ಪಿರಿಟ್ ಕೊಡುತ್ತಿದ್ದೀರಿ ಎಂಬುದನ್ನು ಹೇಳುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ:– ಔಷಧಿ ತಯಾರು ಮಾಡಲಿಕ್ಕೆ ರೆಕ್ಟಿಫೈಡ್ ಸ್ಪಿರಿಟ್ ತೆಗೆದುಕೊಂಡು ಅದನ್ನು ದುರುಪಯೋಗ ಮಾಡಿದ್ದರೆ ಅದರ ಬಗ್ಗೆ ಕಟ್ಟುನಿಟ್ಟಿನ ಕ್ರಮ

ತೆಗೆದುಕೊಳ್ಳುತ್ತೇನೆ. ಔಷಧಿ ತಯಾರು ಮಾಡಲಿಕ್ಕೆ ಯಾರ್ಯಾರಿಗೆ ಎಷ್ಟೆಷ್ಟು ಕೊಡುತ್ತೀರಿ ಅಂದರೆ ಅದರ ಬಗ್ಗೆ ಪ್ರತ್ಯೇಕವಾಗಿ ಮಾಹಿತಿ ಒದಗಿಸುತ್ತೇನೆ.

ಅಧ್ಯಕ್ಷರು:- ಈಗ ಸಭೆ ಮುಂದುವರಿದು ಮಧ್ಯಾಹ್ನ 2 ಗಂಟೆ 30 ನಿಮಿಷಗಳಿಗೆ ಸಮಾವೇಶಗೊಳ್ಳುವುದು.

(ಸಭೆಯು 1 ಗಂಟೆ 28 ನಿಮಿಷಗಳಿಗೆ ಮುಂದೂಡಲ್ಪಟ್ಟಿತು)

(ಸದನವು ಪುನಃ ಮಧ್ಯಾಹ್ನ 2-45ಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷಿಣಿ ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ನಿಯಮ 334ರ ಮೇಲಿನ ಚರ್ಚೆ

(1) ಹೊಸ ವಾಣಿಜ್ಯ ಶಾಲೆಗಳನ್ನು ತೆರೆಯಲು ಅರ್ಜಿಗಳ ಶೀಘ್ರ ವಿಲೇವಾರಿ.

ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ):- ಮಾನ್ಯ ಉಪಾಧ್ಯಕ್ಷಿಣಿಯವರೆ, ಹೊಸ ವಾಣಿಜ್ಯ ಶಾಲೆಗಳನ್ನು ತೆರೆಯಲು ಡಿಡಿಪಿಐ ಆಫೀಸಿನವರು ವರ್ಷದಲ್ಲಿ ಎರಡು ಬಾರಿ ಅಂದರೆ ಮಾರ್ಚ್ ಹಾಗೂ ಅಕ್ಟೋಬರ್ ತಿಂಗಳುಗಳಲ್ಲಿ ಅರ್ಜಿಗಳನ್ನು ಕರೆಯುವುದು ವಾಡಿಕೆ. ಮಾರ್ಚ 1992ರಲ್ಲಿ ಕರೆದಿದ್ದ ಅರ್ಜಿಗಳನ್ನು ಇತ್ಯರ್ಥ ಮಾಡಿ ಪರ್ಮಿಷನ್ ಕೊಡದೆ, ಅಕ್ಟೋಬರ್ 1992ರಲ್ಲಿ ಮತ್ತೆ ಅರ್ಜಿಗಳನ್ನು ಕರೆದಿದ್ದಾರೆ. ಇದು ಸರಿಯೆ? ಮಾರ್ಚ್ 1992ರಲ್ಲಿ ಕರೆದಿದ್ದ ಅರ್ಜಿಗಳನ್ನು ಇತ್ಯರ್ಥ ಮಾಡಲು ಸರ್ಕಾರಕ್ಕೆ ಇರುವ ತೊಂದರೆ ಏನು? ಹೊಸ ವಾಣಿಜ್ಯ ಶಾಲೆಗೆ ಅರ್ಜಿಗಳನ್ನು ಹಾಕಬಯಸುವವರು ಬಾಡಿಗೆ ಆಧಾರದ ಮೇಲೆ ನಿವೇಶನವನ್ನು ತೆಗೆದುಕೊಂಡು ಕರಾರು ಪತ್ರದ ನಕಲನ್ನು ಅರ್ಜಿಯ ಜೊತೆ ಹಾಕಬೇಕಾಗಿದ್ದು, ಅದರಂತೆ, ಮಾರ್ಚ್ 1992ರಲ್ಲಿ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಗಳು ನಿವೇಶನವನ್ನು ಬಾಡಿಗೆಗೆ ತೆಗೆದುಕೊಂಡಿದ್ದು ಕಳೆದ ಒಂದು ವರ್ಷದಿಂದ ಸುಮ್ಮನೆ ಬಾಡಿಗೆಯನ್ನು ಕಟ್ಟುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆ? ಇವರಿಗೆ ಪರ್ಮಿಷನ್ ಸಿಗುವುದೋ ಇಲ್ಲವೋ ಗೊತ್ತಾಗದೇ ಅಭ್ಯರ್ಥಿಗಳು ಕಳವಳದಿಂದಿದ್ದಾರೆ. ಅಭ್ಯರ್ಥಿಗಳಿಗೆ ಪರ್ಮಿಷನ್ ಸಿಕ್ಕಿದೆಯೋ ಇಲ್ಲವೋ ಎಂಬುದನ್ನು ತಿಳಿಸಬೇಕಾದ್ದು ಸರ್ಕಾರದ ಕರ್ತವ್ಯವಲ್ಲವೆ? ಏಕೆ ಇಷ್ಟು ವಿಳಂಬವಾಗಿದೆ? ಕಾನೂನು ಉಲ್ಲಂಘನೆ ಮಾಡಿರುವ ಈ ಅಧಿಕಾರಿಗಳ ಮೇಲೆ ಕ್ರಮ ಜರುಗಿಸುವಿರಿ? ಮಾರ್ಚ್ 1992ರಲ್ಲಿ ಅರ್ಜಿಗಳನ್ನು ಪರಿಗಣಿಸಿ ಇಲಾಖಾ ಅಧಿಕಾರಿಗಳ ಮೀಟಿಂಗ್ ಕರೆದು ಯಾವಾಗ ಪರ್ಮಿಷನ್ ಕೊಡಲಾಗುವುದು ಎಂಬುದನ್ನು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಉತ್ತರ ಇನ್ನೂ ಬಂದಿಲ್ಲ, ಉತ್ತರವನ್ನು ತರಿಸಿಕೊಡುತ್ತೇನೆ.

(2) ವನ್ಯ ಜೀವಿಗಳ ಸಂರಕ್ಷಣೆಗಾಗಿ ಅಗತ್ಯ ವೃತ್ತಗಳ ರಚನೆ

ಶ್ರೀಮತಿ ಸುಮಾವಸಂತಿ (ವಿರಾಜಪೇಟೆ):- ಮಾನ್ಯ ಉಪಾಧ್ಯಕ್ಷಿಣಿಯವರೆ, ವನ್ಯ ಜೀವಿಗಳ ಸಂರಕ್ಷಣೆಗಾಗಿ ರಾಜ್ಯದಲ್ಲಿ ಪ್ರತ್ಯೇಕವಾಗಿ ಎರಡು ವೃತ್ತಗಳನ್ನೂ, 8 ವಿಭಾಗಗಳನ್ನೂ ರಚಿಸಲಾಯಿತು. ವನಸಂಪತ್ತು, ವನ್ಯಜೀವಿಗಳ ಕೇಂದ್ರೀಕರಣ ಆಧಾರವಾಗಿ ಈ ಹೊಸ ವೃತ್ತ ಹಾಗೂ ವಿಭಾಗಗಳಾಗಿದ್ದರೆ ಆ ವ್ಯವಸ್ಥೆಯನ್ನು ಮೆಚ್ಚಬಹುದಾಗಿತ್ತು. ಆದರೆ ಈಗಿನ ಪರಿಸ್ಥಿತಿ ವಿಚಿತ್ರವಾಗಿದೆ. ಉದಾಹರಣೆಗೆ ತಲಕಾವೇರಿ ಸುತ್ತಮುತ್ತ ಇರುವ 105 ಚದರ ಕಿಲೋಮೀಟರ್ ಜಾಗವನ್ನು ತಲಕಾವೇರಿ ವನ್ಯಜೀವಿ ಧಾಮ ಎಂದು ಘೋಷಿಸಲಾಗಿದೆ. ತಲಕಾವೇರಿ ಭಾಗವನ್ನು ಮೊದಲು ಅಲ್ಲಿಂದ 8 ಕಿಲೋಮೀಟರ್ ದೂರದ ಭಾಗಮಂಡಲದ ಸಿಬ್ಬಂದಿ